# ವಿಶ್ವ ಸಮಾಜ ವಿಜ್ಞಾನ ವರದಿ 1999

ಯುನೆಸ್ಕೋ ಪ್ರಕಟಣೆ/ಎಲ್ಸಿವಿಯರ್

# ಇಪ್ಪತ್ತೊಂದನೆಯ ಶತಮಾನದಲ್ಲಿ ಸಮಾಜ ವಿಜ್ಞಾನಗಳು

ಎಮ್ಯಾನ್ಯುಯೆಲ್ ವಾಲರ್‌ಸ್ಟೀನ್

ಈ ಅಧ್ಯಾಯವು ಇಪ್ಪತ್ತೊಂದನೆಯ ಶತಮಾನದಲ್ಲಿ ಸಮಾಜ ವಿಜ್ಞಾನಗಳ ಭವಿಷ್ಯದ ಕುರಿತು ಚರ್ಚಿಸುತ್ತದೆ. ಜ್ಞಾನ ರಚನೆಗಳ ಸಮಗ್ರ ವಿಕಾಸ ಹಾಗೂ ವಿಶ್ವವಿದ್ಯಾಲಯ ವ್ಯವಸ್ಥೆಯ ಸಾಂಸ್ಥಿಕ ಚೌಕಟ್ಟಿನಲ್ಲಿ ಸಮಾಜ ವಿಜ್ಞಾನಗಳನ್ನು ಇಟ್ಟು ಈ ಚರ್ಚೆಯನ್ನು ನಡೆಸಲಾಗುತ್ತದೆ. ಹೀಗೆ ಮುಂದಿನ ಬೆಳವಣಿಗೆಗೆ ಸಮಂಜಸವೆಂದು ತೋರುವ ಪರ್ಯಾಯಗಳನ್ನು ಕಂಡುಕೊಳ್ಳುವ ಉದ್ದೇಶದಿಂದ ಸಮಾಜ ವಿಜ್ಞಾನಗಳ ಐತಿಹಾಸಿಕ ರಚನೆಗಳು ಮತ್ತು ಸದ್ಯದಲ್ಲಿ ಅವುಗಳು ಎದುರಿಸುತ್ತಿರುವ ಸವಾಲುಗಳನ್ನು ಇದು ಮರುಪರಿಶೀಲನೆಗೊಳಪಡಿಸುತ್ತದೆ. ಸಮಾಜ ವಿಜ್ಞಾನಗಳು ಹದಿನೆಂಟನೆಯ ಶತಮಾನದ ಕೊನೆಯಲ್ಲಿ ನೈಸರ್ಗಿಕ ವಿಜ್ಞಾನಗಳು ಹಾಗೂ ಮಾನವಿಕಗಳೆರಡೂ ಬೌದ್ಧಿಕವಾಗಿ ಮತ್ತು ರಾಜಕೀಯವಾಗಿ 'ಬೇರೆ' ಆದ ಸಂದರ್ಭದಲ್ಲಿ ಅವೆರಡರ ನಡುವೆ ಹರಿದು ಹಂಚಿಹೋದ ಅಸಾಧಾರಣ-ಅಧ್ಯಯನ ಶಿಸ್ತಾಗಿ ವಿಕಾಸಗೊಂಡವು. ಹತ್ತೊಂಬತ್ತನೇ ಶತಮಾನದ ಮರುರಚಿಸಿದ ವಿಶ್ವವಿದ್ಯಾಲಯದ ಚೌಕಟ್ಟಿನೊಳಗೆ ಕೆಲವು ಪ್ರತ್ಯೇಕ ಸಮಾಜ ವಿಜ್ಞಾನ ಶಿಸ್ತುಗಳ ಸರಣಿಯೊಂದನ್ನು ಸೃಷ್ಟಿಸಲಾಯಿತು. 1945ರಿಂದೀಚೆಗೆ ಈ ಅಧ್ಯಯನ ಶಿಸ್ತುಗಳು ಬೌದ್ಧಿಕ ವಲಯದಲ್ಲಿ ಒಂದನ್ನೊಂದು ಅತಿವ್ಯಾಪಿಸುವುದನ್ನು ಮತ್ತು ತಾವು ಹೆಸರಿಗೆ ಮಾತ್ರ ಅಲ್ಲದ ಪ್ರತ್ಯೇಕ ಅಧ್ಯಯನ ಶಿಸ್ತೆಂದು ಪ್ರತಿಪಾದಿಸುವುದನ್ನು ಹೆಚ್ಚೆಚ್ಚು ಕಾಣುತ್ತೇವೆ. 'ಎರಡು ಸಂಸ್ಕೃತಿ'ಗಳೂ ಸಹ ನೈಸರ್ಗಿಕ ವಿಜ್ಞಾನಗಳು (ಸಂಕೀರ್ಣತಾ ಅಧ್ಯಯನಗಳು) ಮತ್ತು ಮಾನವಿಕಗಳು (ಸಾಂಸ್ಕೃತಿಕ ಅಧ್ಯಯನಗಳು) ಇವುಗಳಿಂದ ಉದ್ಭವವಾದ ಮೂಲಭೂತ ಸವಾಲುಗಳನ್ನು ಎದುರಿಸಿವೆ. ಜ್ಞಾನಮೀಮಾಂಸೆಯಲ್ಲಾಗಬಹುದಾದ ಪ್ರಮುಖ ವಿಪ್ಲವ ( ಜ್ಞಾನದ ಪುನರೇಕೀಕರಣ), ಮುಖ್ಯ ಪಾತ್ರ ವಹಿಸಿದ್ದ ವಿಶ್ವವಿದ್ಯಾಲಯದ ಮಹತ್ವ ಕಡಮೆಯಾಗುತ್ತಾ ಹೋಗುತ್ತಿರುವುದು, ಇವೆಲ್ಲವೂ ಸಮಾಜ ವಿಜ್ಞಾನಗಳ ಮೇಲೆ ಬೀರಬಹುದಾದ ಪರಿಣಾಮಗಳನ್ನು ಇಲ್ಲಿ ಶೋಧಿಸಲಾಗಿದೆ.

★★★★★

ಮುಂದೇನು ಘಟಿಸುತ್ತದೆ ಅಥವಾ ಘಟಿಸಬಹುದಾದ ಸಾಧ್ಯತೆ ಇದೆ ಎಂದು ಹೇಳುವುದು ಯಾವಾಗಲೂ ಅಪಾಯಕಾರಿ. ಅನಿಶ್ಚಿತತೆಯು ಭವಿಷ್ಯದ ಅಂತರ್ಗತ ಭಾಗವಾಗಿರುವುದರಿಂದ ಸರಳೀಕರಿಸಲಾಗದ ಊಹನಾ ಅಂಶವನ್ನು ಒಳಗೊಂಡಿರುತ್ತದೆ.[1] ಅಂತಹ ಪರಿಸ್ಥಿತಿಯಲ್ಲಿ ಇತ್ತೀಚಿನ ಒಲವುಗಳನ್ನು, ಮುಂದುವರಿಯಬಹುದಾದ ಬೆಳವಣಿಗೆಯ ಹಾದಿಗಳ ಸಾಧ್ಯತೆಗಳನ್ನು, ಸಂಭವನೀಯ ಆಯ್ಕೆಯ ನೆಲೆಗಳನ್ನು ನಾವು ಖಚಿತಪಡಿಸಲು ಪ್ರಯತ್ನಿಸಬಹುದಷ್ಟೇ. ಅಂದರೆ, ನಮ್ಮ ವಿಷಯಕ್ಕೆ ಸಂಬಂಧಿಸಿದಂತೆ ಸಮಾಜ ವಿಜ್ಞಾನಗಳು ಐತಿಹಾಸಿಕವಾಗಿ ಹೇಗೆ ರಚಿಸಲ್ಪಟ್ಟಿವೆ, ಅಂತಹ ರಚನೆಗಳು ಸದ್ಯದಲ್ಲಿ ಎದುರಿಸುತ್ತಿರುವ ಸವಾಲುಗಳೇನು, ಮತ್ತು ಮುಂದಿನ ದಶಮಾನಗಳಲ್ಲಿ ಮತ್ತು ಶತಮಾನದಲ್ಲಿ ಪರಿಣಮಿಸಬಹುದಾದ ಸಮಂಜಸವೆಂದು ತೋರುವ ಪರ್ಯಾಯಗಳಾವುವು ಎಂಬುದರ ಬಗ್ಗೆ ಚರ್ಚಿಸುವುದು ಅನಿವಾರ್ಯವಾಗುತ್ತದೆ.

ಸಮಾಜ ವಿಜ್ಞಾನಗಳ ಭವಿಷ್ಯದ ಕುರಿತಾದ ಚರ್ಚೆಯನ್ನು ಮಾಡುವಲ್ಲಿ ಎರಡನೆಯ ಕಷ್ಟವೊಂದಿದೆ. ಸಮಾಜ ವಿಜ್ಞಾನಗಳು ಸಾಮಾಜಿಕ ಕ್ರಿಯೆಗಳಿಗೆ ಸೀಮಿತವಾದ ಸ್ವಾಯತ್ತ ಕ್ಷೇತ್ರವಲ್ಲ. ಅವು ಆಧುನಿಕ ಜಗತ್ತಿನ ವಿಶಾಲ ವಾಸ್ತವತೆಯಾದ ಜ್ಞಾನ ರಚನೆಯ ಒಂದು ಭಾಗವಾಗಿವೆ. ಅಲ್ಲದೆ ಅವು ಸಂಪೂರ್ಣವಾಗಿಯಲ್ಲದಿದ್ದರೂ ಬಹಳಷ್ಟು ಮಟ್ಟಿಗೆ ಆಧುನಿಕ ಜಗತ್ತಿನ ಒಂದು ಪ್ರಮುಖ ಸಾಂಸ್ಥಿಕ ಚೌಕಟ್ಟಾದ ವಿಶ್ವವಿದ್ಯಾಲಯ ವ್ಯವಸ್ಥೆಯೊಳಗೆ ನೆಲೆಗೊಂಡಿವೆ. ಸಮಾಜ ವಿಜ್ಞಾನಗಳ ಐತಿಹಾಸಿಕ ರಚನೆಯನ್ನಾಗಲಿ, ಸದ್ಯದ ಸವಾಲುಗಳನ್ನಾಗಲಿ ಮತ್ತು ಈಗಿರುವ ಸಮಂಜಸವೆಂದು ತೋರುವ ಪರ್ಯಾಯಗಳನ್ನಾಗಲಿ ಜಗತ್ತಿನ ಜ್ಞಾನದ ಸಮಗ್ರ ರಚನೆಗಳ ವಿಕಾಸದ ಚೌಕಟ್ಟು ಹಾಗು ವಿಕಾಸಗೊಳ್ಳುತ್ತಿರುವ ವಿಶ್ವವಿದ್ಯಾಲಯ ವ್ಯವಸ್ಥೆಯ ಸಾಂಸ್ಥಿಕ ಚೌಕಟ್ಟುಗಳ ಪರಿಧಿಯಿಂದ ಹೊರತುಪಡಿಸಿ ಚರ್ಚಿಸುವುದು ದುಸ್ತರವಾದುದು. ಆದ್ದರಿಂದ ನಾನು ಈ ಸಂಗತಿಗಳನ್ನು ಮೂರು ಕಾಲಮಿತಿಯ ಚೌಕಟ್ಟಿನಲ್ಲಿ ಚರ್ಚಿಸುತ್ತೇನೆ: ಐತಿಹಾಸಿಕ ರಚನೆ; ಸಮಕಾಲೀನ ಸವಾಲುಗಳು; ಮತ್ತು ಸಮಂಜಸವೆಂದು ತೋರುವ ಭವಿಷ್ಯದ ಪರ್ಯಾಯಗಳು. ಮೊದಲೆರಡು ಕಾಲಮಿತಿಯ ಚೌಕಟ್ಟುಗಳ ಸಂಗತಿಗಳನ್ನು ಕೇವಲ ಭವಿಷ್ಯವನ್ನು ಕುರಿತು ಚರ್ಚಿಸುವುದಕ್ಕೆ ಹಿನ್ನೆಲೆಯನ್ನು ಒದಗಿಸುವ ಉದ್ದೇಶದಿಂದ ಅತ್ಯಂತ ಸ್ಥೂಲವಾಗಿ ಮಂಡಿಸುತ್ತೇನೆ. ಪ್ರತಿಯೊಂದು ಕಾಲಮಿತಿಯ ಚೌಕಟ್ಟಿನಲ್ಲೂ ನಾನು ಮೂರು ಚರ್ಚಾಂಶಗಳನ್ನು ಪರಿಗಣಿಸುತ್ತೇನೆ: ಜ್ಞಾನದ ಸಮಗ್ರ ರಚನೆಗಳು; ವಿಶ್ವವಿದ್ಯಾಲಯ ವ್ಯವಸ್ಥೆಯ ವಿಕಾಸ; ಮತ್ತು ಸಮಾಜ ವಿಜ್ಞಾನಗಳ ನಿರ್ದಿಷ್ಟ ಲಕ್ಷಣ.

## ಐತಿಹಾಸಿಕ ರಚನೆ

ನಮಗೆ ತಿಳಿದಿರುವ ಈ ಹಿಂದಿನ ಎಲ್ಲ ಜಾಗತಿಕ ವ್ಯವಸ್ಥೆಗಳಿಗಿಂತ ಆಧುನಿಕ ಜಗತ್ತಿನ ಜ್ಞಾನದ ರಚನೆಗಳು ಒಂದು ಮೂಲಭೂತ ಬಗೆಯಲ್ಲಿ ಭಿನ್ನವಾಗಿವೆ. ಇತರ ಎಲ್ಲ ಐತಿಹಾಸಿಕ ವ್ಯವಸ್ಥೆಗಳಲ್ಲಿ, ಜ್ಞಾನದ ಮೌಲಿಕ ವ್ಯವಸ್ಥೆಗಳು ಏನೇ ಇರಲಿ, ಅದರ ಸೃಷ್ಟಿ ಮತ್ತು ಮರುಸೃಷ್ಟಿಯ

[1] This has now been set forth as a scientific proposition by Ilya Prigogine, *The End of Certainty*, New York, Free Press, 1997.

ಪ್ರಾಥಮಿಕ ಜವಾಬ್ದಾರಿಯು ಅದರೊಳಗಿನ ಯಾವುದೇ ಗುಂಪಿನದಾಗಿರಲಿ, ಜ್ಞಾನಮೀಮಾಂಸೆಗೆಸಂಬಂಧಿಸಿದಂತೆ ಎಲ್ಲ ರೀತಿಯ ಜ್ಞಾನವು ಏಕೀಕೃತ ಜ್ಞಾನವೆಂದು ಪರಿಗಣಿಸಲ್ಪಟ್ಟಿದ್ದವು. ಯಾವುದೇ ದತ್ತ ಐತಿಹಾಸಿಕ ವ್ಯವಸ್ಥೆಯಲ್ಲಿ ಖಂಡಿತವಾಗಿಯೂ ವಿಭಿನ್ನ ಚಿಂತನಾಶಾಖೆಗಳು ಅಭಿವೃದ್ಧಿಗೊಂಡಿರಬಹುದು, ಮತ್ತು ಅವುಗಳು ಒಳಗೊಂಡಿರುವ 'ಸತ್ಯ'ವನ್ನು ಕುರಿತು ಸಾಕಷ್ಟು ಭಿನ್ನಾಭಿಪ್ರಾಯಗಳೂ ಇದ್ದಿರಬಹುದು, ಆದರೆ ಒಂದಕ್ಕೊಂದು ಆಮೂಲಾಗ್ರವಾಗಿ ವಿಭಿನ್ನವಾದ ಎರಡು ಬಗೆಯ ಸತ್ಯಗಳಿವೆ ಎಂದು ಯಾವುದೇ ಕಾಲದಲ್ಲಿಯೂ ಪರಿಗಣಿಸಿರಲಿಲ್ಲ. ಸಿ.ಪಿ.ಸ್ನೋ(C.P.Snow)[2] ಅವರ ಪ್ರಸಿದ್ಧ ನುಡಿಗಟ್ಟನ್ನು ಬಳಸಿ ಹೇಳುವುದಾದರೆ, ಆಧುನಿಕ ಜಾಗತಿಕ ವ್ಯವಸ್ಥೆಯ ಒಂದು ವಿಶಿಷ್ಟ ಲಕ್ಷಣವೆಂದರೆ ಈ ವ್ಯವಸ್ಥೆಯು 'ಎರಡು ಸಂಸ್ಕೃತಿ'ಗಳನ್ನೊಳಗೊಂಡಿರುವ ಜ್ಞಾನದ ರಚನೆಯೊಂದನ್ನು ಅಭಿವೃದ್ಧಿಪಡಿಸಿತು.

'ಎರಡು ಸಂಸ್ಕೃತಿಗಳು' ಸೃಷ್ಟಿಸಿದ ಬಿಕ್ಕಟಿನ ಚೌಕಟ್ಟಿನಲ್ಲಿ ಸಮಾಜ ವಿಜ್ಞಾನಗಳ ಐತಿಹಾಸಿಕ ರಚನೆ ಘಟಿಸಿತು. ಆದರೆ ಮೊದಲಿಗೆ 'ಎರಡು ಸಂಸ್ಕೃತಿಗಳು' ಸೃಷ್ಟಿಯಾಗಬೇಕಿತ್ತು.[3] ಗಡಿಗಳ ಅನುಪಸ್ಥಿತಿಯು ದ್ವಿಗುಣವಾಗಿತ್ತು. ವಿದ್ವಾಂಸರುಗಳು ತಮ್ಮ ಜ್ಞಾನವನ್ನು ಯಾವುದೇ ಒಂದು ಕ್ಷೇತ್ರಕ್ಕೆ ಸೀಮಿತಗೊಳಿಸಿಕೊಳ್ಳಬೇಕು ಎಂಬುದರಲ್ಲಿ ಅರ್ಥವೇ ಇರಲಿಲ್ಲ. ಹಾಗೂ ತತ್ವಶಾಸ್ತ್ರ ಮತ್ತು ವಿಜ್ಞಾನವು ಪರಸ್ಪರ ವಿಭಿನ್ನ ಜ್ಞಾನವಲಯಗಳು ಎಂಬುದರಲ್ಲಿ ಖಂಡಿತವಾಗಿಯೂ ಅರ್ಥವಿರಲಿಲ್ಲ. ಈ ಪರಿಸ್ಥಿತಿಯು 1750 ಮತ್ತು 1850ರ ನಡುವಿನ ಕಾಲದಲ್ಲೆಲ್ಲೊ ಮೂಲಭೂತವಾಗಿ ಬದಲಾಗುವ ಸಂಭವವಿತ್ತು, ಇದರ ಪರಿಣಾಮವಾಗಿ ವಿಜ್ಞಾನ ಮತ್ತು ತತ್ವಶಾಸ್ತ್ರವು ಪರಸ್ಪರ 'ಬೇರೆ' ಯಾದವು. ಆಗಿನಿಂದ ನಾವು 'ತತ್ವಶಾಸ್ತ್ರ' ಮತ್ತು 'ವಿಜ್ಞಾನ' ವು ಬೇರೆ ಬೇರೆ ಎಂದು ಹಾಗೂ ಅದಕ್ಕಿಂತ ಹೆಚ್ಚಾಗಿ ಪರಸ್ಪರ ವಿರುದ್ಧವೆಂದು ಪರಿಗಣಿಸಲಾದ ಜ್ಞಾನ ರಚನೆಯ ಚೌಕಟ್ಟಿನೊಳಗೆ ಕಾರ್ಯನಿರ್ವಹಿಸುತ್ತಿದ್ದೇವೆ.

ಜ್ಞಾನದ ಈ ಹೊಸ ರಚನೆಯ ಉಗಮವು ವಿಶ್ವವಿದ್ಯಾಲಯ ವ್ಯವಸ್ಥೆಯಲ್ಲಿ ಎರಡು ಮುಖ್ಯ ರೀತಿಯಲ್ಲಿ ಪ್ರತಿಬಿಂಬಿತವಾಯಿತು. ಮೊದಲನೆಯದಾಗಿ ಅಧ್ಯಯನ ವಿಷಯಗಳ ಮರುಸಂಘಟನೆ. ಮಧ್ಯಕಾಲೀನ ಯುರೋಪಿನ ವಿಶ್ವವಿದ್ಯಾಲಯವು ನಾಲ್ಕು ಅಧ್ಯಯನ ವಿಷಯಗಳನ್ನೊಳಗೊಂಡಿತ್ತು; ದೇವತಾಶಾಸ್ತ್ರ (ಅತ್ಯಂತ ಮುಖ್ಯವಾದುದು), ವೈದ್ಯಶಾಸ್ತ್ರ, ನ್ಯಾಯಶಾಸ್ತ್ರ, ಮತ್ತು ತತ್ವಶಾಸ್ತ್ರ. 1500ರ ಆರಂಭದ ಹೊತ್ತಿಗೆ ದೇವತಾಶಾಸ್ತ್ರಕ್ಕೆ ಇದ್ದ ಮಹತ್ವ ಕಡಮೆಯಾಯಿತು, ಮತ್ತು ಹತ್ತೊಂಬತ್ತನೆಯ ಶತಮಾನದ ಹೊತ್ತಿಗಂತೂ ಹೆಚ್ಚು ಕಡಮೆ

---

[2] C. P. Snow, *The Two Cultures, and a Second Look*, 2nd edition, Cambridge, Cambridge University Press, 1965.

[3] ವಾಲ್ಟರ್ ರೂಯೆಗ್ (Walter Rüegg) ನಮಗೆ ನೆನಪಿಸುತ್ತಾರೆ: 'ಹದಿನೆಂಟನೇ ಶತಮಾನಕ್ಕೂ ಮೊದಲು ವಿಶ್ವವಿದ್ಯಾಯಿಗಳಲ್ಲಿ "ಎರಡು ಸಂಸ್ಕೃತಿಗಳು" ಅಸ್ತಿತ್ವದಲ್ಲಿರಲಿಲ್ಲ. ಎಮ್ಯಾನ್ಯುಯೆಲ್ ಕಾಂಟ್ (Immanuel Kant) (1724–1804) ಕವನಗಳ ಪ್ರಾಧ್ಯಾಪಕರಾಗಬಹುದಿತ್ತು; ಅವರು ನೀಡಿದ ಉಪನ್ಯಾಸಗಳ ಹರವು ಬೋಧನಾವಿಧಾನ, ಮಾನವಶಾಸ್ತ್ರ, ಮತ್ತು ನೈಸರ್ಗಿಕ ನಿಯಮಗಳಿಂದ ಹಿಡಿದು, ತತ್ವಶಾಸ್ತ್ರ, ಭೂಗೋಳಶಾಸ್ತ್ರ, ಗಣಿತಶಾಸ್ತ್ರ, ಖಗೋಳಶಾಸ್ತ್ರಗಳಂತಹ ವಿವಿಧ ಮಾನವ ವಿಜ್ಞಾನಗಳನ್ನು ಒಳಗೊಂಡಿತ್ತು. 1755ರ ಅವರ ಮೊತ್ತಮೊದಲ ಮಹತ್ವದ ಅಧ್ಯಯನಗಳು ಖಗೋಳ ವ್ಯವಸ್ಥೆಯ ಉದ್ಭವದ ಕುರಿತಾಗಿತ್ತು'. (H. de Ridder-Symoens (ed.), *A History of the University in Europe, II: Universities in Early Modern Europe (1500–1800)*, Foreword, p.18, Cambridge, Cambridge University Press, 1996.

ಕಣ್ಮರೆಯೇ ಆಯಿತು. ವೈದ್ಯಶಾಸ್ತ್ರ ಹಾಗೂ ನ್ಯಾಯಶಾಸ್ತ್ರ ಹೆಚ್ಚು ತಾಂತ್ರಿಕವಾಗಿ ಸಂಕುಚಿತಗೊಂಡವು. ಆದಾಗ್ಯೂ, ತತ್ವಶಾಸ್ತ್ರದ ಶಾಖೆಯು ವಿಕಾಸಗೊಂಡ ರೀತಿಯೇ ಬಹಳ ಮುಖ್ಯವಾದ ಸಂಗತಿಯಾಯಿತು. ಹದಿನೆಂಟನೆಯ ಶತಮಾನದಲ್ಲಿ 'ಪರಿಣಿತ'ವೆನಿಸಿಕೊಂಡ ಉನ್ನತ ಕಲಿಕೆಯ ಹೊಸ ಸಂಸ್ಥೆಗಳು ಅದರ ಒಳಗೆ ಮತ್ತು ಹೊರಗೆ ಹುಟ್ಟಿಕೊಂಡವು.[4]

ಮೂಲಭೂತವಾಗಿ ಈಗ ನಾವು ಅಧ್ಯಯನ ಶಿಸ್ತುಗಳೆಂದು ಕರೆಯುವ ವಿಶೇಷತೆಗಳ ಸರಣಿಯನ್ನು ತತ್ವಶಾಸ್ತ್ರದ ಶಾಖೆಯಡಿಯಲ್ಲಿ ಸೃಷ್ಟಿಸುವುದರಿಂದ ಮತ್ತು ಈ ಅಧ್ಯಯನ ಶಿಸ್ತುಗಳನ್ನು ಕೇವಲ ತತ್ವಶಾಸ್ತ್ರದ ಒಂದು ಶಾಖೆಯದಡಿಯಲ್ಲಿ ಮಾತ್ರ ಸೇರಿಸದೆ ಸಾಮಾನ್ಯವಾಗಿ ಅವುಗಳನ್ನು ಎರಡು ಪ್ರತ್ಯೇಕ ವಿಷಯಗಳಡಿಯಲ್ಲಿ–ಕಲಾಶಾಖೆಯ (ಅಥವಾ ಮಾನವಿಕಗಳು ಅಥವಾ ತತ್ವಶಾಸ್ತ್ರವಾಗಿ) ಮತ್ತು ವಿಜ್ಞಾನ ಶಾಖೆಗಳಾಗಿ ವಿಂಗಡಿಸುವ ಮೂಲಕ ವಿಶ್ವವಿದ್ಯಾಲಯ ವ್ಯವಸ್ಥೆಯು ಉಳಿಯಲು ಸಾಧ್ಯವಾಯಿತು. ಇಂಥ ಸುವ್ಯವಸ್ಥಿತ ಮರುರಚನೆಯ ಮಹತ್ವವೇನೆಂದರೆ ಇದು ಕೇವಲ ತತ್ವಶಾಸ್ತ್ರ ಹಾಗೂ ವಿಜ್ಞಾನದ ವಿಭಜನೆಯನ್ನು ಸಾಂಸ್ಥೀಕರಿಸಿದ್ದಷ್ಟೇ ಅಲ್ಲ ಕ್ರಮೇಣವಾಗಿ ವಿಜ್ಞಾನವು ಮಾನವಿಕಗಳು /ತತ್ವಶಾಸ್ತ್ರವನ್ನು ಬದಿಗೆ ಸರಿಸಿ ಸಾಂಸ್ಕೃತಿಕ ಪ್ರತಿಷ್ಠೆಯನ್ನು ಪಡೆದುಕೊಳ್ಳುತ್ತಾ ಹೋಯಿತು. ಪ್ರಾರಂಭದಲ್ಲಿ ವಿಜ್ಞಾನಗಳು ತಮ್ಮ ಪ್ರಾಮುಖ್ಯತೆಯನ್ನು ಪಡೆಯಲು ಹೆಣಗಬೇಕಾಯಿತು. ಆರಂಭದ ಹಂತದಲ್ಲಿ ವಿಶ್ವವಿದ್ಯಾಲಯ ವ್ಯವಸ್ಥೆಯು ಅವಕ್ಕೆ ಪ್ರತಿಕೂಲವಾಗಿತ್ತು ಎಂದು ಕಂಡವು,[5] ಆದರೆ ನಂತರದ ಕೆಲವೇ ವರ್ಷಗಳಲ್ಲಿ ಪರಿಸ್ಥಿತಿ ತದ್ವಿರುದ್ಧವಾಯಿತು.

ಈ ಚಿತ್ರಣಕ್ಕೆ ಸಮಾಜ ವಿಜ್ಞಾನವು ಹೇಗೆ ಸರಿಹೊಂದಿತು ? ಹತ್ತೊಂಬತ್ತನೆಯ ಶತಮನದ ಕೊನೆಯಲ್ಲಿ ನ್ಯೂಟೋನಿಯನ್ ಭೌತಶಾಸ್ತ್ರದ ಸಾಂಸ್ಕೃತಿಕ ಪ್ರಾಬಲ್ಯದ ನೆರಳಿನಲ್ಲಿ ಸಮಾಜ ವಿಜ್ಞಾನವು ಸಾಂಸ್ಥೀಕರಣಗೊಂಡವು. ಸಮಾಜ ವಿಜ್ಞಾನಗಳು 'ಎರಡು ಸಂಸ್ಕೃತಿಗಳ' ಪ್ರತಿಪಾದನೆಗಳ ಸಂಘರ್ಷವನ್ನು ಅಧ್ಯಯನ ವಿಧಾನಗಳ ನಡುವಿನ ವಿವಾದ (*Methodenstreit*

---

4 1781ರ ಹೊತ್ತಿಗೆ, ಸ್ಟುಟ್‌ಗಾರ್ಟ್‌ನಲ್ಲಿನ ಹೊಸ ವಿಶ್ವವಿದ್ಯಾಲಯವೊಂದು ಸಂಪೂರ್ಣವಾಗಿ ತತ್ವಶಾಸ್ತ್ರ ಹಾಗೂ ದೇವತಾಶಾಸ್ತ್ರವನ್ನು ತೆಗೆದುಹಾಕಿ ವೈದ್ಯಶಾಸ್ತ್ರ ಮತ್ತು ನ್ಯಾಯಶಾಸ್ತ್ರಕ್ಕೆ ಮಿಲಿಟರಿ ವಿಜ್ಞಾನ, *Cameralwissenschaft (ಕ್ಯಾಮರ್ಲ್‌ವಿಸೆನ್‌ಶಾಫ್ಟ್)* (ಸಾರ್ವಜನಿಕ ಆಡಳಿತ), ಅರಣ್ಯಶಾಸ್ತ್ರ, ಮತ್ತು ಅರ್ಥಶಾಸ್ತ್ರ ವಿಷಯಗಳನ್ನು ಸೇರಿಸಿತು. ಫ್ರಾನ್ಸ್ ಕ್ರಾಂತಿಯ ಕಾಲದಲ್ಲಿ ಫ್ರೆಂಚ್ ವಿಶ್ವವಿದ್ಯಾಲಯಗಳನ್ನು ರದ್ದುಪಡಿಸಿದಾಗ ಉಳಿದುಕೊಂಡಿದ್ದು ನೆಪೋಲಿಯನ್ ತನ್ನ *ಗ್ರಾಂಡ್ ಇಕೋಲ* (*grandes écoles*) ಗೆ ತಳಹದಿಯನ್ನಾಗಿ ಮಾಡಿಕೊಂಡಿದ್ದ ವಿಶ್ವವಿದ್ಯಾಲಯ ವ್ಯವಸ್ಥೆಯ ಹೊರಗೆ ಸ್ಥಾಪಿಸಲಾದ ವಿಶೇಷ ಕಲಿಕಾಕೇಂದ್ರಗಳಷ್ಟೆ. See Willem Frijhoff, 'Patterns', in H. de Ridder-Symoens, op. cit., pp. 46, 57–8. See also Notker Hammerstein, 'Epilogue: The Enlightenment', ibid., p. 633.

5 ಈ ಕಾರಣದಿಂದಾಗಿ, ಮೊದಲು ಅನೇಕ ವೈಜ್ಞಾನಿಕ ಸಂಸ್ಥೆಗಳನ್ನು ವಿಶ್ವವಿದ್ಯಾಲಯಗಳ ಹೊರಗೆ ಸ್ಥಾಪಿಸಲಾಯಿತು. 'ಹದಿನೆಂಟನೆಯ ಶತಮಾನದಲ್ಲಿ ಮಾತ್ರ ಸಂಕುಚಿತ ಅರ್ಥದಲ್ಲಿ (*stricto sensu*) (ಭೌತಶಾಸ್ತ್ರ, ರಸಾಯನಶಾಸ್ತ್ರ, ಅಥವಾ ಖಗೋಳಶಾಸ್ತ್ರದಂತಹ ನಿಖರವಾದ ಗಣಿತ ವಿಜ್ಞಾನಗಳನ್ನು (exact sciences)) ವಿಶ್ವವಿದ್ಯಾಲಯಗಳ ಕಲಿಕೆಯಲ್ಲಿ ಅವಕ್ಕೆ ಅರ್ಹ ಸ್ಥಾನವನ್ನು ಕಲ್ಪಿಸಲಾಯಿತು....ಮತ್ತು ಬಹಳ ಕಾಲದ ನಂತರವೇ ನಿಜವಾದ ವಿಜ್ಞಾನ ಶಾಖೆಗಳ ಆಧಾರದ ಮೇಲೆ ಅವುಗಳನ್ನು ಸ್ವೀಕಾರಾರ್ಹ ವಿಜ್ಞಾನಗಳೆಂದು ಪರಿಗಣಿಸಲಾಯಿತು (W. Frijhoff, in H. de Ridder-Symoens, ibid., p. 57). ರಾಯ್ ಪೋರ್ಟರ್ (Roy Porter) ಪ್ರಕಾರ ಇದೊಂದು ಉತ್ಪ್ರೇಕ್ಷಿತ ಹೇಳಿಕೆ. ಅವರ ಪ್ರಕಾರ ಹದಿನೇಳು ಹಾಗೂ ಹದಿನೆಂಟನೇ ಶತಮಾನದಲ್ಲಿಯೇ ವಿಶ್ವವಿದ್ಯಾಲಯ ವ್ಯವಸ್ಥೆಯೊಳಗೆ ವೈಜ್ಞಾನಿಕ ಜ್ಞಾನವನ್ನು, ನೇರವಾಗಿಯಲ್ಲದೆ ರಹಸ್ಯವಾಗಿ (*sub rosa*) ಉತ್ತೇಜಿಸಲಾಯಿತು. ಆದಾಗ್ಯೂ, ಅದು ಸಂಪೂರ್ಣವಾಗಿ ಸಮಗ್ರವಾಗಿರಲಿಲ್ಲ ಎನ್ನುವುದನ್ನು ಅವರೂ ಕೂಡ ಒಪ್ಪುತ್ತಾರೆ. See 'The scientific revolution and universities', ibid., pp. 531–62.

*(ಮಿಥೋಡಿನ್ಸ್ಟ್ರೈಟ್)* ವನ್ನಾಗಿ ಆಂತರಿಕಗೊಳಿಸಿಕೊಂಡಿತು. ಅವರಲ್ಲಿ ಕೆಲವರು ಮಾನವಿಕಗಳೆಡೆಗೆ ಒಲವು ತೋರಿ ಇಡಿಯೋಗ್ರಾಫಿಕ್ ಎಪಿಸ್ಟಮಾಲಜಿ (idiographic epistemology – ಸಾಮಾನ್ಯ ನಿಯಮಗಳಿಗಿಂತ ಭಿನ್ನವಾಗಿ, ವಿಶಿಷ್ಟ ಸತ್ಯಸಂಗತಿಗಳು ಮತ್ತು ಪ್ರಕ್ರಿಯೆಗಳನ್ನು ಕಂಡುಕೊಳ್ಳುವ ಅಥವಾ ಅವುಗಳ ಅಧ್ಯಯನಕ್ಕೆ ಸಂಬಂಧಿಸಿದ ಜ್ಞಾನಮೀಮಾಂಸೆ)ಯ ವಿಧಾನವನ್ನು ಬಳಸಿಕೊಂಡರು. ಇವರು ಎಲ್ಲ ಸಾಮಾಜಿಕ ವಿದ್ಯಮಾನಗಳ ವಿಶೇಷತೆ, ಎಲ್ಲ ಸಾಮಾನ್ಯೀಕರಣಗಳ ಸೀಮಿತ ಉಪಯುಕ್ತತೆ, ಮತ್ತು ಒಳನೋಟವುಳ್ಳ ತಿಳುವಳಿಕೆಗೆ ಪ್ರಾಮುಖ್ಯತೆ ನೀಡಿದರು. ನೈಸರ್ಗಿಕ ವಿಜ್ಞಾನದೆಡೆಗೆ ಒಲವು ತೋರಿದ ಮತ್ತೆ ಕೆಲವರು ನೊಮೊಥೆಟಿಕ್ ಎಪಿಸ್ಟಮಾಲಜಿ (nomothetic epistemology – ಅಮೂರ್ತ, ಸಾಮಾನ್ಯ, ಅಥವಾ ಸಾರ್ವತ್ರಿಕ ಪ್ರತಿಪಾದನೆ ಅಥವಾ ನಿಯಮಗಳಿಗೆ ಸಂಬಂಧಿಸಿದ ಅಥವಾ ಅವುಗಳನ್ನು ಒಳಗೊಳ್ಳುವ ಜ್ಞಾನಮೀಮಾಂಸೆ)ಯ ವಿಧಾನವನ್ನು ಬಳಸತೊಡಗಿದರು. ಮಾನವ ಪ್ರಕ್ರಿಯೆ ಹಾಗೂ ಎಲ್ಲಾ ಇತರ ಭೌತಿಕ ಪ್ರಕ್ರಿಯೆಗಳ ನಡುವೆ ತಾರ್ಕಿಕ ಸಮಾನಾಂತರವಿದೆ ಎಂದು ಅವರು ಒತ್ತಿ ಹೇಳಿದರು. ಆದ್ದರಿಂದ ಅವರು ಎಲ್ಲ ಕಾಲ ಹಾಗೂ ದೇಶಕ್ಕೆ ಅನ್ವಯವಾಗುವ ಸಾರ್ವತ್ರಿಕ, ಸರಳ ನಿಯಮಗಳ ಹುಡುಕಾಟದಲ್ಲಿ ಭೌತವಿಜ್ಞಾನವನ್ನು ಅನುಸರಿಸಲು ಪ್ರಯತ್ನಿಸಿದರು. ಸಮಾಜ ವಿಜ್ಞಾನಗಳ ಸ್ಥಿತಿಯು ಪರಸ್ಪರ ವಿರುದ್ಧ ದಿಕ್ಕಿನಲ್ಲಿ ಹೋಗುತ್ತಿರುವ ಕುದುರೆಗಳಿಗೆ ಕಟ್ಟಿಕೊಂಡವನ ಸ್ಥಿತಿಯಂತಾಯಿತು. ತನ್ನದೇ ಆದ ನಿರ್ದಿಷ್ಟ ಜ್ಞಾನಮೀಮಾಂಸೆಗೆಸಂಬಂಧಿಸಿದಂತೆ ಒಂದು ನಿಲುವನ್ನು ಅಭಿವೃದ್ಧಿಪಡಿಸಿಕೊಳ್ಳದ ಕಾರಣ, ಮತ್ತು ಯಾವುದೇ ತಟಸ್ಥ ನಿಲುವನ್ನು ಸಹಿಸದ ಬೃಹತ್ತಾಗಿ ಬೆಳೆದಿದ್ದ ಮಾನವಿಕಗಳು ಹಾಗೂ ನೈಸರ್ಗಿಕ ವಿಜ್ಞಾನಗಳ ನಡುವೆ ಸಿಕ್ಕಿ ಅದು ಅತಂತ್ರವಾಯಿತು.

ಮಾನವಿಕಗಳು ಹಾಗೂ ವಿಜ್ಞಾನವೆಂಬ ಎರಡು ಸಂಸ್ಕೃತಿಯ ವಿಭಜನೆಯ ನಡುವೆ ತನ್ನದೇ ಆದ ಸ್ಥಾನವನ್ನು ಪಡೆದುಕೊಳ್ಳುವ ಪ್ರಯತ್ನದಲ್ಲಿದ್ದ ಸಮಾಜ ವಿಜ್ಞಾನಗಳ ಅಧ್ಯಯನ ವಿಧಾನಗಳ ಆಂತರಿಕ ಸಂಘರ್ಷವನ್ನು ನಾನಿಲ್ಲಿ ಪರಾಮರ್ಶಿಸುವುದಿಲ್ಲ. ಈ ವೈಧಾನಿಕ ಸಂಘರ್ಷದಲ್ಲಿ *(Methodenstreit),* ಆಧುನಿಕ ಜಗತ್ತಿನೊಂದಿಗೆ ವ್ಯವಹರಿಸಲೆಂದು ಸೃಷ್ಟಿಯಾದ ಮೂರು ಅಧ್ಯಯನ ಶಿಸ್ತುಗಳು – ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮತ್ತು ಸಮಾಜ ಶಾಸ್ತ್ರ – ಇವೆಲ್ಲವೂ ನೊಮೊಥೆಟಿಕ್ ವಿಧಾನವನ್ನು ಅನುಸರಿಸಿದವು: ಅಂದರೆ ನ್ಯೂಟನ್ನನ ಯಂತ್ರಶಾಸ್ತ್ರದ ವಿಧಾನಗಳು ಹಾಗೂ ಜ್ಞಾನಮೀಮಾಂಸೆಯ ಲೋಕದೃಷ್ಟಿಯನ್ನು ಪುನರಾವರ್ತಿಸುವುದು. ಇತರ ಸಮಾಜ ವಿಜ್ಞಾನಗಳು ತಮ್ಮನ್ನು ಹೆಚ್ಚು ಮಾನವತಾವಾದದ ಮತ್ತು ನಿರೂಪಣಾತ್ಮಕ ವಿಧಾನಗಳು ಎಂದು ಗುರುತಿಸಿಕೊಂಡರೂ ಕೂಡ ತಮ್ಮದೇ ಆದ ರೀತಿಯಲ್ಲಿ ಭಾಗಶಃ 'ವೈಜ್ಞಾನಿಕ' ಆಗುವ ಪ್ರಯತ್ನವನ್ನು ಮಾಡುತ್ತಲೇ ಇದ್ದವು. ಮಾನವತಾವಾದದ ವಿದ್ವಾಂಸರುಗಳು ಪ್ರಾಯೋಗಿಕ ದತ್ತಾಂಶ ಸಂಗ್ರಹಣೆ ವೈಜ್ಞಾನಿಕವಾಗಿರಬೇಕೆಂಬುದನ್ನು ಒಪ್ಪಿಕೊಂಡರೂ ಸಹ 'ಸಾಮಾನ್ಯೀಕರಣಗಳನ್ನು' ಸಾರ್ವತ್ರೀಕರಣಗೊಳಿಸುವುದರ ಬಗ್ಗೆ ದುರಾಕ್ಷೇಪ ಮಾಡಿದರು.

ಮಾನವಿಕಗಳು ಮತ್ತು ನೈಸರ್ಗಿಕ ವಿಜ್ಞಾನಗಳ ನಡುವೆ ಒಂದು ಜ್ಞಾನದ ಕ್ಷೇತ್ರವಾಗಿ ಮತ್ತು 'ಎರಡು ಸಂಸ್ಕೃತಿ' ಗಳ ನಡುವೆ ಗಂಭೀರವಾಗಿ ಇಬ್ಭಾಗಗೊಂಡ ಸಮಾಜ ವಿಜ್ಞಾಗಳನ್ನು ಅಧ್ಯಯನ ಶಿಸ್ತುಗಳನ್ನಾಗಿಸುವ ಪ್ರಕ್ರಿಯೆ 1945ರ ಹೊತ್ತಿಗೆ ಸ್ಪಷ್ಟತೆಯನ್ನು ಮತ್ತು ಸರಳತೆಯನ್ನು ಪಡೆದುಕೊಳ್ಳುವ ಹಂತವನ್ನು ತಲುಪಿತು. ಆರಂಭದಲ್ಲಿ, 1750ರಿಂದ 1850ರವರೆಗಿನ ಸ್ಥಿತಿಯು

ಬಹಳ ಗೊಂದಲದಿಂದ ಕೂಡಿತ್ತು. ಅಧ್ಯಯನ ಶಿಸ್ತುಗಳಾಗಿ ಸ್ಥೂಲ ರೂಪವನ್ನು ಪಡೆಯುತ್ತಿದ್ದ ಅವುಗಳನ್ನು ಹಲವು ಹೆಸರುಗಳಿಂದ ಕರೆಯಲಾಗುತ್ತಿತ್ತು. ಅವುಗಳಲ್ಲಿ ಕೆಲವು ಹೆಸರುಗಳಿಗೆ ವ್ಯಾಪಕ ಮಾನ್ಯತೆಯೂ ದೊರೆಯಿತು. ನಂತರ, 1850ರಿಂದ 1945ರ ಅವಧಿಯಲ್ಲಿ ಈ ಬಹುನಾಮಧೇಯಗಳನ್ನು ಪರಿಣಾಮಕಾರಿಯಾಗಿ ಕಡಮೆಗೊಳಿಸಿ ಪರಸ್ಪರ ಸ್ಪಷ್ಟವಾಗಿ ಪ್ರತ್ಯೇಕಿಸಿ ನೋಡಲು ಸಾಧ್ಯವಾಗುವಂತಹ ಸಣ್ಣ ಪ್ರಮಾಣಿತ ಗುಂಪಾಗಿ ಮಾಡಲಾಯಿತು. ನಮ್ಮ ಅಭಿಪ್ರಾಯದಲ್ಲಿ ವಿದ್ವಾಂಸರುಗಳ ಜಗತ್ತಿನಲ್ಲಿ ವ್ಯಾಪಕವಾಗಿ ಮಾನ್ಯತೆ ಪಡೆದಂತಹ ಆರು ಹೆಸರುಗಳು ಮಾತ್ರ ಇದ್ದವು, ಮತ್ತು ಅವು ಹತ್ತೊಂಬತ್ತನೇ ಶತಮಾನದ ಅಂತ್ಯದಲ್ಲಿ ಸಂಭಾವ್ಯವೆನಿಸುವಂತಹ ಮೂರು ಆಧಾರಗಳಿರುವ ಬಿರುಕುಗಳನ್ನು ಪ್ರತಿಬಿಂಬಿಸಿದವು: ಭೂತ (ಇತಿಹಾಸ) ಮತ್ತು ವರ್ತಮಾನದ (ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮತ್ತು ಸಮಾಜಶಾಸ್ತ್ರ) ನಡುವಿನ ಬಿರುಕು; ಪಾಶ್ಚಾತ್ಯ ನಾಗರಿಕ ಜಗತ್ತು (ಮೇಲಿನ ನಾಲ್ಕು ಅಧ್ಯಯನ ಶಿಸ್ತುಗಳು) ಮತ್ತು ಇನ್ನುಳಿದ ಜಗತ್ತಿನ ('ಆದಿಮ' ಜನರ ಅಧ್ಯಯನಕ್ಕೆ ಮಾನವಶಾಸ್ತ್ರ ಹಾಗೂ ಪಶ್ಚಿಮೇತರ 'ಉನ್ನತ ನಾಗರಿಕತೆ'ಗಳ ಅಧ್ಯಯನಕ್ಕೆ ಪೌರಸ್ತ್ಯ ಅಧ್ಯಯನಗಳು) ನಡುವಿನ ಬಿರುಕು; ಇದಲ್ಲದೆ ಕೇವಲ ಆಧುನಿಕ ಪಾಶ್ಚಾತ್ಯ ಜಗತ್ತಿಗೆ ಅನ್ವಯವಾಗುವ ಮಾರುಕಟ್ಟೆಯ ತರ್ಕ (ಅರ್ಥಶಾಸ್ತ್ರ), ಪ್ರಭುತ್ವ (ರಾಜ್ಯಶಾಸ್ತ್ರ), ಮತ್ತು ನಾಗರಿಕ ಸಮಾಜ (ಸಮಾಜಶಾಸ್ತ್ರ) ಇವುಗಳ ನಡುವಿನ ಬಿರುಕು.

1945ರ ನಂತರ, ಹಲವು ಕಾರಣಗಳಿಂದಾಗಿ, ಈ ಸ್ಪಷ್ಟ ರಚನೆ ಮುರಿದು ಬಿದ್ದಿತು. ಪ್ರಾದೇಶಿಕ ಅಧ್ಯಯನಗಳ ಬೆಳವಣಿಗೆಯು ಪಾಶ್ಚಾತ್ಯ-ಕೇಂದ್ರಿತ ಶಿಸ್ತುಗಳು ಇತರ ಜಗತ್ತಿನ ಅಧ್ಯಯನಗಳನ್ನು ಅಂತರ್ವ್ಯಾಪಿಸಿದವು ಮತ್ತು ಈ ಪ್ರದೇಶಗಳ ಅಧ್ಯಯನಕ್ಕೆಂದು ವಿಶಿಷ್ಟವಾಗಿದ್ದ ಪೌರಸ್ತ್ಯ ಅಧ್ಯಯನಗಳ ಹಾಗೂ ಮಾನವಶಾಸ್ತ್ರಗಳ ಮಹತ್ವವನ್ನು ಕಡಮೆ ಮಾಡಿದವು.[6] ಜಗತ್ತಿನೆಲ್ಲೆಡೆ ವ್ಯಾಪಿಸುತ್ತಿದ್ದ ವಿಶ್ವವಿದ್ಯಾಲಯ ವ್ಯವಸ್ಥೆಯಿಂದಾಗಿ ಸಮಾಜ ವಿಜ್ಞಾನಿಗಳ ಸಂಖ್ಯೆ ಗಮನಾರ್ಹವಾಗಿ ಹೆಚ್ಚಳವಾಯಿತು. ಪರಿಣಾಮವಾಗಿ ಸಮಾಜ ವಿಜ್ಞಾನವು ತನ್ನ ಸ್ಥಾನವನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಈ ಮೊದಲಿನ ಶಿಸ್ತುಗಳ ನಡುವಿನ ಗಡಿಗಳನ್ನು 'ಅತಿಕ್ರಮಿಸು'ವ ಪರಿಸ್ಥಿತಿಯನ್ನುಂಟು ಮಾಡಿತು, ಮತ್ತು ವಾಸ್ತವದಲ್ಲಿ ಇದು ಗಡಿರೇಖೆಗಳು ಮಸುಕಾಗಲು ಕಾರಣವಾಯಿತು. ಆನಂತರ, 1970ರ ದಶಕದಲ್ಲಿ ಇದೂವರೆಗೆ ಕಡೆಗಣಿಸಲ್ಪಟ್ಟಿದ್ದ ಗುಂಪುಗಳನ್ನು (ಮಹಿಳೆ, ಅಲ್ಪಸಂಖ್ಯಾತರು, ಮುಖ್ಯವಾಹಿನಿಯಲ್ಲಿಲ್ಲದ ಸಾಮಾಜಿಕ ಗುಂಪುಗಳು) ಶೈಕ್ಷಣಿಕ ಅಧ್ಯಯನದಲ್ಲಿ ಒಳಗೊಳ್ಳಬೇಕೆಂಬ ಬೇಡಿಕೆಯು ವಿಶ್ವವಿದ್ಯಾಲಯಗಳಲ್ಲಿ ಹೊಸ ಅಂತರ್‌ಶಿಸ್ತೀಯ ಅಧ್ಯಯನ ಕಾರ್ಯಕ್ರಮಗಳನ್ನು ರಚಿಸಲು ಕಾರಣವಾಯಿತು. ಇದೆಲ್ಲದರಿಂದಾಗಿ ಮಾನ್ಯವೆಂದು ಪರಿಗಣಿಸಲಾದ ಅಧ್ಯಯನ ಕ್ಷೇತ್ರಗಳ ಹೆಸರುಗಳ ಸಂಖ್ಯೆ ವಿಸ್ತಾರಗೊಂಡಿತು, ಮತ್ತು ಇದು ಹೀಗೆ ಮುಂದುವರೆಯುತ್ತದೆಂಬ ಎಲ್ಲ ಲಕ್ಷಣಗಳು ಕಾಣಿಸುತ್ತಿವೆ. ಶಿಸ್ತುಗಳ ನಡುವಿನ ಗಡಿಗಳು ಕಣ್ಮರೆಯಾಗುತ್ತಿರುವುದರಿಂದ, ವಾಸ್ತವಿಕವಾಗಿ ಒಂದನ್ನೊಂದು ಅತಿಕ್ರಮಿಸುತ್ತಿರುವುದರಿಂದ, ಹಾಗೂ ಕ್ಷೇತ್ರಗಳು ವಿಸ್ತಾರಗೊಳ್ಳುತ್ತಿರುವುದರಿಂದ, ಒಂದು ವಿಧದಲ್ಲಿ ಉಪಯುಕ್ತ

[6] See Immanuel Wallerstein, 'The unintended consequences of Cold War area studies', in N. Chomsky et al., *The Cold War and the University: Toward an Intellectual History of the Postwar Years*, pp. 195–231, New York, New Press, 1997.

ವರ್ಗೀಕರಣಕ್ಕೆ ಆಸ್ಪದ ನೀಡದಷ್ಟು ಪ್ರವರ್ಗಗಳು ಇದ್ದಂತಹ 1750ರಿಂದ 1850ರ ಪರಿಸ್ಥಿತಿಗೆ ಮತ್ತೆ ನಮ್ಮನ್ನು ಕರೆದೊಯ್ಯುತಿದೆ.

ನೈಸರ್ಗಿಕ ವಿಜ್ಞಾನ, ಮಾನವಿಕಗಳು, ಮತ್ತು ಸಮಾಜ ವಿಜ್ಞಾನಗಳೆಂಬ ಜ್ಞಾನದ ತ್ರಿವಿಧ ವಿಭಜನೆಯು ಟೀಕೆಗೊಳಗಾಗಿರುವುದು ಸಹ ಸಮಾಜ ವಿಜ್ಞಾನಗಳ ಮೇಲೆ ಪರಿಣಾಮ ಬೀರಿದೆ. ಪ್ರಮುಖವಾಗಿ ಎರಡು ಹೊಸ ಜ್ಞಾನ ಪ್ರವೃತ್ತಿಗಳು ಇದರಲ್ಲಿ ಒಳಗೊಂಡಿವೆ ಮತ್ತು ಅವೆರಡರಲ್ಲಿ ಯಾವುದೂ ಸಹ ಸಮಾಜ ವಿಜ್ಞಾನಗಳ ಮೂಲವನ್ನು ಹೊಂದಿರುವುದಿಲ್ಲ. ಒಂದು, 'ಸಂಕೀರ್ಣತಾ ಅಧ್ಯಯನಗಳು (complexity studies)'* (ನೈಸರ್ಗಿಕ ವಿಜ್ಞಾನದ ಮೂಲದ್ದು), ಇನ್ನೊಂದು, 'ಸಾಂಸ್ಕೃತಿಕ ಅಧ್ಯಯನಗಳು' (ಮಾನವಿಕಗಳ ಮೂಲದ್ದು). ವಾಸ್ತವದಲ್ಲಿ, ಇವೆರಡು ಪ್ರವೃತ್ತಿಗಳು ವಿಭಿನ್ನ ನಿಲುವಿನಿಂದ ಪ್ರಾಂಭವಾಗಿದ್ದರೂ ಕೂಡ, ಹದಿನೇಳನೇ ಶತಮಾನದಲ್ಲಿ ಪ್ರಬಲ ವಿಧಾನವೆಂದೆನಿಸಿಕೊಂಡ ನೈಸರ್ಗಿಕ ವಿಜ್ಞಾನವನ್ನು, ಅಂದರೆ ನ್ಯೂಟನ್ನನ ಯಾತ್ರಿಕವಾದವನ್ನು ಆಧರಿಸಿದ ವಿಜ್ಞಾನದ ಮಾದರಿಯನ್ನು ತಮ್ಮ ಟೀಕೆಯ ಗುರಿಯಾಗಿಸಿಕೊಂಡವು.

## ಇಂದಿನ ಸವಾಲುಗಳು

ಹತ್ತೊಂಬತ್ತನೇ ಶತಮಾನದ ಅಂತ್ಯದಿಂದ ಅದರಲ್ಲೂ ವಿಶೇಷವಾಗಿ ಕಳೆದ ಇಪ್ಪತ್ತು ವರ್ಷಗಳಲ್ಲಿ ನೈಸರ್ಗಿಕ ವಿಜ್ಞಾನಿಗಳ ಒಂದು ದೊಡ್ಡ ಗುಂಪು ನ್ಯೂಟೋನಿಯನ್ ವಿಜ್ಞಾನದ ಪ್ರಮೇಯಗಳನ್ನು ಗಂಭೀರವಾಗಿ ಪ್ರಶ್ನಿಸತೊಡಗಿದ್ದಾರೆ. ಭವಿಷ್ಯವು ಸಹಜವಾಗಿಯೇ ಅನಿಶ್ಚಿತತೆಯನ್ನು

### ಸಮಾಜ ವಿಜ್ಞಾನಗಳಲ್ಲಿ ಮಾನವರು ಹಾಗೂ ಪ್ರಕೃತಿ

ನೈಸರ್ಗಿಕ ವಿಜ್ಞಾನಗಳು ವಿಶ್ವವನ್ನು ಅಸ್ಥಿರ ಮತ್ತು ಅನೂಹ್ಯವೆಂದು ಗುರುತಿಸುವ ದಿಕ್ಕಿನಲ್ಲಿ ಸಾಗುತ್ತಿರುವ ಅದೇ ವೇಳೆಯಲ್ಲಿ ಸಮಾಜ ವಿಜ್ಞಾನಗಳು ಪ್ರಕೃತಿಯನ್ನು ಹೆಚ್ಚು ಹೆಚ್ಚಾಗಿ ಗೌರವಿಸುವ ದಿಕ್ಕಿನತ್ತ ನಡೆಯುತ್ತಿರುವುದರಿಂದ ವಿಶ್ವವು ಹೇಗೋ ಪ್ರಕೃತಿಯಿಂದ ಹೊರಗುಳಿದ ಮಾನವನ ಪ್ರಾಬಲ್ಯಕ್ಕೆ ಒಳಪಡುವ ನಿರ್ಜೀವ ಯಂತ್ರವಲ್ಲ ಬದಲಾಗಿ ಅದೊಂದು ಸಕ್ರಿಯ ವಾಸ್ತವ ಎಂದು ಕಲ್ಪಿಸುತ್ತಿವೆ. ನೈಸರ್ಗಿಕ ವಿಜ್ಞಾನ ಹಾಗೂ ಸಮಾಜ ವಿಜ್ಞಾನಗಳೆರಡೂ ಕೂಡ ಸಂಕೀರ್ಣ ವ್ಯವಸ್ಥೆಗಳೊಂದಿಗೆ ವ್ಯವಹರಿಸುತ್ತಿವೆ ಎಂದು ಗುರುತಿಸಿದಷ್ಟೂ ಅವೆರಡು ಒಂದೇ ಕಡೆಗೆ ಸರಿಯುತ್ತಿರುವುದು ಕಂಡುಬರುತ್ತದೆ. ಇಂಥ ಸಂಕೀರ್ಣ ವ್ಯವಸ್ಥೆಗಳಲ್ಲಿ ಭವಿಷ್ಯದ ಬೆಳವಣಿಗೆಗಳು ಕಾಲಗತಿಯಲ್ಲಿ ಹಿಂದೆ ಮರಳಲು ಸಾಧ್ಯವೇ ಇರದ ಅಲ್ಪಕಾಲಿಕ ಪ್ರಕ್ರಿಯೆಗಳ ಪರಿಣಾಮಗಳಾಗಿವೆ.

ವರ್ತನಾ ಆನುವಂಶಿಕತೆಯ (behavioural genetics) ಇತ್ತೀಚಿನ ಸಂಶೋಧನೆಗೆ ಪ್ರತಿಕ್ರಿಯಿಸುತ್ತಾ ಕೆಲವು ಸಮಾಜ ವಿಜ್ಞಾನಿಗಳು ಸಮಾಜ ವಿಜ್ಞಾನಗಳು ಜೈವಿಕಶಾಸ್ತ್ರದತ್ತ ಹೆಚ್ಚು ಒಲವು ತೋರಿಸಬೇಕೆಂದು ಒತ್ತಾಯಿಸುತ್ತಿದ್ದಾರೆ. Human genome project ನ ಅನುಮಿತವಾದ ಆಧಾರದ ಮೇಲೆ ಕೆಲವರು ಅನುವಂಶೀಯ ನಿಯತವಾದಿ (genetic determinism) ಚಿಂತನೆಗೆ ಮರುಜೀವ ಕೊಡುವ ಕೆಲಸವನ್ನೂ ಮಾಡುತ್ತಿದ್ದಾರೆ. ಈ ಹಾದಿ ಅತ್ಯಂತ ದೋಷಪೂರಿತವಾದುದು ಮತ್ತು ಸಮಾಜ ವಿಜ್ಞಾನಗಳ ಮುನ್ನಡೆಗೆ ಅಡ್ಡಿಯಾಗುತ್ತದೆ ಎಂದು ನಮಗನಿಸುತ್ತದೆ. ಹಿಂದೆಂದಿಗಿಂತಲೂ ಇಂದು ಸಾಮಾಜಿಕ ಕ್ರಿಯಾತ್ಮಕತೆಯ

ಸಂಕೀರ್ಣತೆಯನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳಬೇಕೆಂಬುದು ನೈಸರ್ಗಿಕ ವಿಜ್ಞಾನಗಳ ಇತ್ತೀಚಿನ ಬೆಳವಣಿಗೆಗಳಿಂದ ಕಲಿತಿರುವ ಅತಿ ದೊಡ್ಡ ಪಾಠವೆಂದು ನಮಗನಿಸುತ್ತದೆ.

ಆದರ್ಶ ಸ್ಥಿತಿಗಳು (utopias) ಸಮಾಜ ವಿಜ್ಞಾನಗಳ ಕಳಕಳಿಯಾಗಿವೆ, ಆದರೆ ಇದು ನೈಸರ್ಗಿಕ ವಿಜ್ಞಾನಗಳ ಕಳಕಳಿಯಾಗಿರುವುದಿಲ್ಲ, ಮತ್ತು ಖಂಡಿತವಾಗಿಯೂ ಇಂದಿನ ವರ್ತಮಾನದ ಒಲವುಗಳು ಆದರ್ಶ ಸ್ಥಿತಿಗಳಿಗೆ ಆಧಾರವಾಗಿರಬೇಕು. ಭವಿಷ್ಯವು ನಿಶ್ಚಿತವಾದುದಲ್ಲ, ಅದು ಸಾಧ್ಯವೂ ಇಲ್ಲ ಎಂದು ನಮಗೀಗ ಸ್ಪಷ್ಟವಾಗಿದ್ದರೂ ಕೂಡ ಭವಿಷ್ಯದ ಮಾನಸಿಕ ಚಿತ್ರಣಗಳು ಮಾನವರ ವರ್ತಮಾನದ ಕ್ರಿಯೆಯನ್ನು ನಿರ್ಧರಿಸುತ್ತವೆ. ನಿಶ್ಚಿತತೆಯನ್ನು ಹೊರಗಿಟ್ಟಿರುವುದರಿಂದ, ನಾವೀಗಾಗಲೇ ದಾಖಲಿಸಿರುವಂತೆ ಬುದ್ಧಿಜೀವಿಗಳ ಪಾತ್ರ ಅಗತ್ಯವಾಗಿ ಬದಲಾಗುತ್ತಿದೆ ಮತ್ತು ತಟಸ್ಥ ವಿಜ್ಞಾನಿಯ ಕಲ್ಪನೆಯು ಗಂಭೀರವಾಗಿ ಪ್ರಶ್ನೆಗೊಳಗಾಗುತ್ತಿರುವ ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯವು ಈ ಜಗತ್ತಿನಿಂದ ಹೊರಗುಳಿಯುವುದು ಅಸಾಧ್ಯ. ಆದರ್ಶ ಸ್ಥಿತಿಗಳ ಪರಿಕಲ್ಪನೆಗಳು ಪ್ರಗತಿಯ ಸಾಧ್ಯತೆಯ ಕಲ್ಪನೆಗೆ ಸಂಬಂಧಿಸಿವೆ, ಆದರೆ ಕೆಲವರು ಈ ಹಿಂದೆ ಯೋಚಿಸಿದಂತೆ ಅವುಗಳ ಸಾಧಿಸುವಿಕೆ ಕೇವಲ ನೈಸರ್ಗಿಕ ವಿಜ್ಞಾನಗಳಲ್ಲಿನ ಪ್ರಗತಿಯ ಮೇಲೆ ಅವಲಂಬಿತವಾಗಿರುವುದಿಲ್ಲ ಬದಲಿಗೆ ಅದು ಈ ಸಂಕೀರ್ಣ ಜಗತ್ತಿನಲ್ಲಿ ತನ್ನತನದ ಅಭಿವ್ಯಕ್ತಿಯಾಗಿರುವ, ಹೆಚ್ಚಾಗುತ್ತಿರುವ ಮಾನವೀಯ ಸೃಜನಶೀಲತೆಯನ್ನು ಅವಲಂಬಿಸಿರುತ್ತದೆ.

ವಿಜ್ಞಾನ, ನೀತಿಶಾಸ್ತ್ರ, ಅಥವಾ ಸಮಾಜ ವ್ಯವಸ್ಥೆಗಳು, ಯಾವುದೇ ಇರಲಿ ನಾವು ದೃಢನಂಬಿಕೆಗಳ ಸಂಘರ್ಷವುಳ್ಳ ಸಾಮಾಜಿಕ ಗತಕಾಲದಿಂದ ನಿಶ್ಚಿತತೆಗಳ ಸಹಜ ಸಾಧ್ಯತೆಗಳ ಕುರಿತ ಪ್ರಶ್ನೆಯನ್ನೂ ಒಳಗೊಂಡಂತೆ ಮಹತ್ವದ ಪ್ರಶ್ನೆಗಳನ್ನೆದುರಿಸುವ ಈ ಕಾಲಕ್ಕೆ ಬಂದಿದ್ದೇವೆ. ಬಹುಶಃ ನಾವು ನಮ್ಮ ಕಾಲಕ್ಕೆ ತಥ್ಯವಾಗದ ಒಂದು ವಿಧದ ವೈಚಾರಿಕತೆ ಕೊನೆಗೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗುತ್ತಿದ್ದೇವೆ. ಸಾಕಷ್ಟು ಶಕ್ತಿ ಪಡೆದುಕೊಳ್ಳುತ್ತಿರುವ ಅಧ್ಯಯನ ಶಿಸ್ತುಗಳ ಮಿತಿಯನ್ನು ಮೀರುವ ಪ್ರವೃತ್ತಿಗೆ ಹೊಂದಿಕೆಯಾಗುವ ಸಂಕೀರ್ಣ, ತಾತ್ಕಾಲಿಕ ಮತ್ತು ಅಸ್ಥಿರತೆಯ ಅಂಶಗಳಿಗೆ ಒತ್ತುಕೊಡಲು ನಾವು ಆಗ್ರಹಿಸುತ್ತಿದ್ದೇವೆ. ಇದರರ್ಥ ನಾವು ವೈಚಾರಿಕತೆಯ ಮೂಲಭೂತ (substantive rationality) ಅಂಶಗಳನ್ನು ತ್ಯಜಿಸಬೇಕೆಂದಲ್ಲ. ವೈಟ್ಹೆಡ್ (Whitehead) ಅವರು ಬಹಳ ಉತ್ತಮವಾಗಿ ಹೇಳಿರುವಂತೆ ನೈಸರ್ಗಿಕ ವಿಜ್ಞಾನಿಗಳಿಗೆ ಹಾಗೂ ಮಾನವ ಸಮಾಜ ಜೀವನದ ವಿದ್ಯಾರ್ಥಿಗಳಿಬ್ಬರ ಯೋಜನೆಗೆ ವಿಶ್ವದ ಗ್ರಹಿಕೆಯೇ ಕೇಂದ್ರವಾಗಿದೆ: 'ನಮ್ಮ ಅನುಭವದ ಪ್ರತಿಯೊಂದು ಅಂಶವನ್ನು ವ್ಯಾಖ್ಯಾನಿಸಲು ಸಾಧ್ಯವಾಗುವಂತೆ ಒಂದು ಸುಸಂಬದ್ಧವಾದ, ತರ್ಕಬದ್ಧವಾದ, ಸಾಮಾನ್ಯ ಚಿಂತನೆಗಳ ಒಂದು ಅತ್ಯಾವಶ್ಯಕ ವ್ಯವಸ್ಥೆಯ ಚೌಕಟ್ಟನ್ನು ರಚಿಸುವುದು.'

Source: *Open the Social Sciences: Report of the Gulbenkian Commission on the Restructuring of the Social Sciences*, Stanford, Calif., Stanford University Press, 1996. Reproduced by courtesy of Stanford University Press.

ಒಳಗೊಂಡಿದೆಯನ್ನುವಂತೆ ಅವರು ನೋಡುತ್ತಾರೆ. ಅವರ ಪ್ರಕಾರ ಸಮತೋಲನಗಳಿರುವುದು ಅಪರೂಪ, ಮತ್ತು ಭೌತಿಕ ವಿದ್ಯಮಾನಗಳು ಎಂದಿಗೂ ಸಮಸ್ಥಿತಿಯಲ್ಲಿರುವುದಿಲ್ಲ. ವ್ಯವಸ್ಥೆಯು ಕ್ರಮೇಣ ಅವ್ಯವಸ್ಥೆಗೆ (entropy) ಇಳಿಯುವುದು ವಿಭಜನೆಗೆ ಕಾರಣವಾಗುತ್ತದೆ ಮತ್ತು ಆ ಮೂಲಕವೇ ಅವ್ಯವಸ್ಥೆಯಿಂದ ಹೊಸತಾದ (ನಿರೀಕ್ಷಿಸಲು ಸಾಧ್ಯವಿಲ್ಲದಿದ್ದರೂ ಕೂಡ) ವ್ಯವಸ್ಥೆಯ ಹುಟ್ಟಿಗೆ ಕಾರಣವಾಗುತ್ತವೆ. ಮತ್ತು ಆದ್ದರಿಂದ ವ್ಯವಸ್ಥೆಯು ಅವ್ಯವಸ್ಥೆಗೆ ಇಳಿಯುವುದರ ಪರಿಣಾಮ ನಾಶವಲ್ಲ ಬದಲಿಗೆ ಸೃಷ್ಟಿ ಎನ್ನುವುದು ಅವರ ದೃಷ್ಟಿಕೋನವಾಗಿದೆ. ಪ್ರತಿಯೊಂದು ಭೌತವಸ್ತುವಿನ ಮೂಲಭೂತ ಪ್ರಕ್ರಿಯೆಯು ಸ್ವಾಭಾವಿಕವಾಗಿಯೇ ವ್ಯವಸ್ಥಿತದ್ದಾಗಿರುತ್ತದೆ ಎಂದು ಅವರು ನೋಡುತ್ತಾರೆ. ಅವರು ಇದನ್ನು ಕೆಲವು ಘೋಷಣೆಗಳ ರೂಪದಲ್ಲಿ ಪ್ರತಿಪಾದಿಸುತ್ತಾರೆ: ಕಾಲದ ಸಮರೂಪತೆಯಲ್ಲ ಬದಲಿಗೆ ಅವ್ಯವಸ್ಥೆ; ನಿಶ್ಚಿತತೆಯಲ್ಲದೆ ಅನಿಶ್ಚಿತತೆಯನ್ನು

ಜ್ಞಾನಮೀಮಾಂಸೆಯ ಗೃಹೀತವನ್ನಾಗಿ ಹೊಂದಿರುವುದು; ವಿಜ್ಞಾನದ ಅಂತಿಮ ಫಲ ಸರಳತೆಯಲ್ಲ ಬದಲಿಗೆ ಸಂಕೀರ್ಣತೆಯ ವಿವರಣೆ.[7]

ಸಂಕೀರ್ಣತಾ ಅಧ್ಯಯನ ವಿಜ್ಞಾನಿಗಳ ಟೀಕೆಗೆ ಗುರಿಯಾದ ಅದೇ ನಿಯತವಾದ ಮತ್ತು ಸಾರ್ವತ್ರಿಕವಾದವು ಸಾಂಸ್ಕೃತಿಕ ಅಧ್ಯಯನಗಳ ಟೀಕೆಗೆ ಗುರಿಯಾದವು. ಸಾರ್ವತ್ರಿಕತೆಯ ಹೆಸರಿನಲ್ಲಿ ಸಾಮಾಜಿಕ ವಾಸ್ತವವನ್ನು ಕುರಿತು ಮಾಡಿದ ಪ್ರತಿಪಾದನೆಗಳು ನಿಜಕ್ಕೂ ಸಾರ್ವತ್ರಿಕವಾದವುಗಳಲ್ಲ ಎನ್ನುವ ನೆಲೆಯಲ್ಲಿ ಅದನ್ನು ಅವು ಟೀಕಿಸಿದವು. ಸಾಂಸ್ಕೃತಿಕ ಅಧ್ಯಯನಗಳು ಸಾಂಪ್ರದಾಯಿಕ ರೀತಿಯದ ಮಾನವತಾವಾದದ ವಿದ್ವತ್ತನ್ನು ತರಾಟೆಗೆ ತೆಗೆದುಕೊಂಡವು. ಏಕೆಂದರೆ ಇಂಥ ವಿದ್ವತ್ತುಗಳು ಒಳಿತು ಹಾಗೂ ಸೌಂದರ್ಯದ (ಸ್ವೀಕೃತವಾದವುಗಳೆಂದು ಕರೆಯಬಹುದಾದ) ವಲಯದಲ್ಲಿ ಸಾರ್ವತ್ರಿಕ ಮೌಲ್ಯಗಳನ್ನು ಪ್ರತಿಪಾದಿಸಿದ್ದವು, ಮತ್ತು ಪಠ್ಯಗಳನ್ನು ಇಂತಹ ಸಾರ್ವತ್ರಿಕವಾಗಿ ಅನ್ವಯವಾಗುವ ಅರ್ಥೈಸುವಿಕೆಗಳನ್ನು ಒಳಗೊಂಡಿರುತ್ತದೆ ಎನ್ನುವ ರೀತಿಯಲ್ಲಿ ಆಂತರಿಕ ವಿಶ್ಲೇಷಣೆಗೆ ಒಳಪಡಿಸಿದ್ದವು. ಇದಕ್ಕೆ ಬದಲಾಗಿ ಪಠ್ಯಗಳು ಸಾಮಾಜಿಕ ವಿದ್ಯಮಾನವಾಗಿದ್ದು ಒಂದು ನಿರ್ದಿಷ್ಟ ಸಂದರ್ಭದಲ್ಲಿ ರಚಿತವಾಗಿರುತ್ತವೆ ಮತ್ತು ಒಂದು ನಿರ್ದಿಷ್ಟ ಸಂದರ್ಭದಲ್ಲಿ ಅವುಗಳನ್ನು ಓದಲಾಗುತ್ತದೆ ಅಥವಾ ಅರ್ಥಮಾಡಿಕೊಳ್ಳಲಾಗುತ್ತದೆ ಎನ್ನುವುದನ್ನು ಸಾಂಸ್ಕೃತಿಕ ಅಧ್ಯಯನಗಳು ಒತ್ತಿ ಹೇಳಿದವು.[8]

ಮೇಲ್ನೋಟಕ್ಕೆ ಕಾಣಿಸುವ ಕೆಲವು ವೈಪರಿತ್ಯಗಳು ಸಾರ್ವತ್ರಿಕ ನಿಯಮಗಳ ಆಧಾರಗಳ ಬಗ್ಗೆ ನಮಗಿರುವ ಅಜ್ಞಾನವನ್ನಷ್ಟೇ ತೋರಿಸುತ್ತವೆ ಎನ್ನುವ ಆಧಾರದ ಮೇಲೆ ಸಾಂಪ್ರದಾಯಿಕ ಭೌತಶಾಸ್ತ್ರವು ಕೆಲವು 'ಸತ್ಯಗಳನ್ನು' ಬದಿಗೆ ಸರಿಸಲು ಪ್ರಯತ್ನಿಸಿತು. 'ಒಳಿತು ಮತ್ತು ಸೌಂದರ್ಯ'ದ ಕುರಿತು ಮೇಲ್ನೋಟಕ್ಕೆ ಕಾಣುವ ಭಿನ್ನ ಅರ್ಥೈಸುವಿಕೆಯು ಅದು ಕೇವಲ ಅಂತಹ ಭಿನ್ನತೆಗಳನ್ನು ಮಾಡಿರುವವರು ಸರಿಯಾದ ಅಭಿರುಚಿಯನ್ನು ಬೆಳೆಸಿಕೊಂಡಿಲ್ಲ ಎನ್ನುವ ಸತ್ಯಸಂಗತಿಯನ್ನು ಪ್ರತಿಬಿಂಬಿಸುತ್ತದೆ ಎನ್ನುವ ಆಧಾರದ ಮೇಲೆ ಸಾಂಪ್ರದಾಯಿಕ ಮಾನವಿಕಗಳು ಕೆಲವು ವಿಧದ ಅರ್ಥೈಸುವಿಕೆಯನ್ನು ಬದಿಗೆ ಸರಿಸಲು ಪ್ರಯತ್ನಿಸಿತು. ನೈಸರ್ಗಿಕ ವಿಜ್ಞಾನ ಹಾಗೂ ಮಾನವಿಕಗಳಲ್ಲಿನ ಈ ಸಾಂಪ್ರದಾಯಿಕ ದೃಷ್ಟಿಕೋನಗಳಿಗೆ ಆಕ್ಷೇಪಣೆ ವ್ಯಕ್ತಪಡಿಸಿದ ಎರಡೂ ಪ್ರವೃತ್ತಿಗಳು – ಸಂಕೀರ್ಣತಾ ಅಧ್ಯಯನಗಳು ಹಾಗೂ ಸಾಂಸ್ಕೃತಿಕ ಅಧ್ಯಯನಗಳು – ಹತ್ತೊಂಬತ್ತನೇ ಶತಮಾನದ ವಿಜ್ಞಾನ ಹಾಗೂ ತತ್ವಶಾಸ್ತ್ರಗಳ ಬೇರ್ಪಡುವಿಕೆಯಿಂದ ಜ್ಞಾನ ಕ್ಷೇತ್ರಕ್ಕೆ ಲಭ್ಯವಾಗದಂತೆ ಮುಚ್ಚಿಹೋಗಿದ್ದ ಹೊಸ ಸಾಧ್ಯತೆಗಳನ್ನು 'ತೆರವು' ಮಾಡಲು ಪ್ರಯತ್ನಿಸಿದವು.

---

[7] For a bibliographical overview of the field, as of 1992, see Richard Lee, 'Readings in the "New Science", a selective annotated bibliography', *Review*, Vol. XV, No. 1, Winter 1992, pp. 113–71.

[8] There is, virtually by definition, no canonic overview of cultural studies. For one omnibus collection, see Lawrence Grossberg, Cary Nelson and Paula Treichler (eds.), *Cultural Studies*, New York, Routledge, 1992.

# ಸಮಾಜ ವಿಜ್ಞಾನ ಸಂಸ್ಥೆಗಳ ಮರುರಚನೆ

ನಮ್ಮ ಪ್ರಕಾರ ಸಮಾಜ ವಿಜ್ಞಾನಗಳ ಬೌದ್ಧಿಕ ಸ್ಪಷ್ಟೀಕರಣ ಮತ್ತು ಅಂತಿಮವಾಗಿ ಪರಿಪೂರ್ಣ ಮರುರಚನೆಯ ಕಡೆಗೆ ಉಪಯುಕ್ತ ಮಾರ್ಗಗಳನ್ನಾಗಿ ಸಮಾಜ ವಿಜ್ಞಾನಗಳ ಜ್ಞಾನದ ರಚನೆಗಳ ಆಡಳಿತಗಾರರು (ವಿಶ್ವವಿದ್ಯಾಲಯದ ಆಡಳಿತಗಾರರು, ಸಮಾಜ ವಿಜ್ಞಾನಗಳ ಸಂಶೋಧನಾ ಮಂಡಳಿಗಳು, ಶಿಕ್ಷಣ ಮತ್ತು/ಅಥವಾ ಸಂಶೋಧನಾ ಸಚಿವಾಲಯಗಳು, ಶೈಕ್ಷಣಿಕ ಪ್ರತಿಷ್ಠಾನಗಳು, UNESCO (ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ), ಅಂತಾರಾಷ್ಟ್ರೀಯ ಸಮಾಜ ವಿಜ್ಞಾನ ಸಂಸ್ಥೆಗಳು ಇತ್ಯಾದಿ.) ಪ್ರೋತ್ಸಾಹಿಸಬಹುದಾದ ಮತ್ತು ಪ್ರೋತ್ಸಾಹಿಸಲೇಬೇಕಾದ ಕನಿಷ್ಟ ನಾಲ್ಕು ವಿಧದ ರಚನಾತ್ಮಕ ಬೆಳವಣಿಗೆಗಳಿವೆ:

1. *ವಿಶ್ವವಿದ್ಯಾಲಯದೊಳಗೆ ಅಥವಾ ಅದಕ್ಕೆ ಸಂಬಂಧ ಹೊಂದಿದಂತೆ ಒಂದು ವರ್ಷದ ಅವಧಿಗೆ ಒಂದು ಸಾಮಾನ್ಯ ಗುರಿಯನ್ನುದ್ದೇಶಿಸಿ ನಿರ್ದಿಷ್ಟ ತುರ್ತು ವಿಷಯಗಳಿಗೆ ಸಂಬಂಧಿಸಿದಂತೆ ಸಂಶೋಧನೆ ನಡೆಸಲು ವಿದ್ವಾಂಸರನ್ನು ಒಟ್ಟು ಸೇರಿಸುವ ಸಂಸ್ಥೆಗಳ ವಿಸ್ತರಣೆ.*
   ಇವು ಈಗಾಗಲೇ ಅಸ್ತಿತ್ವದಲ್ಲಿದೆಯಾದರೂ ಅವು ಅತ್ಯಂತ ಕಡಮೆ ಸಂಖ್ಯೆಯಲ್ಲಿವೆ. ಒಂದು ಮಾದರಿ ಎಂದರೆ ೧೯೭೦ರಿಂದ ಇದನ್ನು ಮಾಡುತ್ತಿರುವ ಜರ್ಮನಿಯ ಬಿಲಿಫೆಡ್ (Bielefeld) ವಿಶ್ವವಿದ್ಯಾಲಯದಲ್ಲಿರುವ ZiF (Zentrum für interdisziplinäre Forschung). ಇತ್ತೀಚಿಗೆ ಒಂದು ವರ್ಷದ ಅವಧಿಗೆ ಆಯ್ಕೆ ಮಾಡಿದ ವಿಷಯಗಳೆಂದರೆ: ದೇಹ ಮತ್ತು ಸೋಲ್, ಬದಲಾವಣೆಯ ಜೈವಿಕ ಹಾಗೂ ಸಾಮಾಜಿಕ ಮಾದರಿಗಳು, ಆದರ್ಶ ಸ್ಥಿತಿಗಳು. ಇಲ್ಲಿ ಮುಖ್ಯವಾದ ಅಂಶವೆಂದರೆ ಪರಸ್ಪರ ವಿನಿಮಯವು ಪರಿಣಾಮಕಾರಿಯಾಗಿರುವಂತೆ ಹಿಂದಿನ ಸಂಶೋಧನಾ ದೃಷ್ಟಿಕೋನಗಳೊಂದಿಗೆ ಸಾಕಷ್ಟು ಸುಸಂಬದ್ಧವಾಗಿರಬೇಕೆಂಬುದಕ್ಕೆ ಇನ್ನೂ ಒತ್ತು ನೀಡುತ್ತಲೇ, ಅಂತಹ ವರ್ಷಾವಧಿಯ ಸಂಶೋಧನಾ ಗುಂಪುಗಳ ಆಯ್ಕೆಯನ್ನು ಮೊದಲೇ ಜಾಗರೂಕವಾಗಿ ಯೋಜಿಸಿಕೊಳ್ಳಬೇಕು ಮತ್ತು ವ್ಯಾಪಕವಾಗಿ ಸದಸ್ಯರನ್ನು ಒಳಗೊಂಡಿರಬೇಕು (ಅಧ್ಯಯನ ಶಿಸ್ತುಗಳು, ಭೌಗೋಳಿಕ ವಲಯಗಳು, ಸಾಂಸ್ಕೃತಿಕ ಮತ್ತು ಭಾಷಿಕ ವಲಯಗಳು, ಮತ್ತು ಲಿಂಗತ್ವಕ್ಕೆ ಸಂಬಂಧಿಸಿದಂತೆ).

2. *ನಿರ್ದಿಷ್ಟ ಬೌದ್ಧಿಕ ಉದ್ದೇಶಗಳನ್ನು ಹೊಂದಿರುವ, ಮತ್ತು ನಿಗದಿತ ಅವಧಿಗೆ ಮೀಸಲಾದ ಧನಸಹಾಯವನ್ನು (ಉದಾ: ಐದು ವರ್ಷಗಳ ಅವಧಿಗೆ) ಹೊಂದಿದ ಸಾಂಪ್ರದಾಯಿಕ ಗಡಿಗಳನ್ನು ಮೀರಿದ ಸಮಗ್ರ ಸಂಶೋಧನಾ ಯೋಜನೆಗಳನ್ನು ವಿಶ್ವವಿದ್ಯಾಲಯದ ರಚನೆಯೊಳಗೆ ಸ್ಥಾಪಿಸುವುದು.* ಇದು ಅವಧಿಯ ಮಿತಿಯಿಲ್ಲದ ಮತ್ತು ನಿಧಿ-ಸಂಗ್ರಹಿಸುವ ರಚನೆಗಳಾಗಿರಬೇಕೆಂದು ನಿರೀಕ್ಷಿಸುವ ಸಾಂಪ್ರದಾಯಿಕ ಸಂಶೋಧನಾ ಕೇಂದ್ರಗಳಿಗಿಂತ ಭಿನ್ನವಾಗಿರುತ್ತದೆ. ಆದಾಗ್ಯೂ, ನಿರಂತರ ಪ್ರಯೋಗಕ್ಕೆಂದಿರುವ ಈ ಐದು ವರ್ಷ ಕಾಲಾವಧಿಯ ಕಾರ್ಯರೀತಿಯನ್ನೊಳಗೊಂಡ ತಾತ್ಕಾಲಿಕ ಲಕ್ಷಣವುಳ್ಳ ಇಂಥ ಯೋಜನೆಗಳು ಒಮ್ಮೆ ಆರಂಭದಲ್ಲಿ ಧನಸಹಯ ಪಡೆದ ನಂತರ ಭಾಗವಹಿಸಿದವರನ್ನು ಈ ಕಾಳಜಿಯಿಂದ ಬಿಡುಗಡೆ ಹೊಂದುವಂತೆ ಮಾಡುತ್ತದೆ. ಬಹು ವಿಧದ ಹೊಸ ಕಾರ್ಯಕ್ರಮಗಳಿಗೆ ಬೇಡಿಕೆಗಳು ಬರುತ್ತಿರುವಾಗ ತಕ್ಷಣವೇ ಹೊಸ ಬೋಧನಾ ಕಾರ್ಯಕ್ರಮಗಳನ್ನು ಪ್ರಾರಂಭಿಸುವ ಬದಲು ಬಹುಶಃ ಇಂತಹ ಸಂಶೋಧನಾ ಕಾರ್ಯಕ್ರಮದ ಮೂಲಕ ಪ್ರತಿಪಾದಕರು ತಮ್ಮ ದೃಷ್ಟಿಕೋನಗಳ ಉಪಯುಕ್ತತೆ ಮತ್ತು ಸ್ವೀಕಾರಾರ್ಹತೆಯನ್ನು ತೋರಿಸಲು ಅನುವು ಮಾಡಿಕೊಡುವ ಸಾಧ್ಯತೆಗಳ ಅಗತ್ಯವಿದೆ.

3. *ಪ್ರಾಧ್ಯಾಪಕರ ಜಂಟಿ ನೇಮಕಾತಿ ಕಡ್ಡಾಯಗೊಳ್ಳಬೇಕು.*
   ಪ್ರಾಧ್ಯಾಪಕರು ಯಾವ ವಿಷಯದಲ್ಲಿ ಉನ್ನತ ಪದವಿಯನ್ನು ಪಡೆದಿರುತ್ತಾರೋ ಆ ವಿಭಾಗಕ್ಕೆ

ಸಂಯೋಜಿತರಾಗಿರುವುದು ಇಂದಿನ ಸಾಮಾನ್ಯ ನಿಯಮವಾಗಿದೆ. ಕೆಲವು ಸಂದರ್ಭಗಳಲ್ಲಿ, ಮತ್ತು ಹೆಚ್ಚು ಕಡಮೆ ವಿಶೇಷ ವಿನಾಯತಿಯಾಗಿ ಕೆಲವು ಪ್ರಾಧ್ಯಾಪಕರು ಮತ್ತೊಂದು ವಿಭಾಗದೊಂದಿಗೆ 'ಜಂಟಿ ನೇಮಕಾತಿ' ಯನ್ನು ಹೊಂದಿರುತ್ತಾರೆ. ಅನೇಕ ವೇಳೆ ಇದು ಕೇವಲ ಔಪಚಾರಿಕವಾಗಿರುತ್ತದೆ ಮತ್ತು ಆ ಪ್ರಾಧ್ಯಾಪಕರಿಗೆ 'ಎರಡನೆಯ ಅಥವಾ ದ್ವಿತೀಯ ವಿಭಾಗದ' ಕಾರ್ಯಗಳಲ್ಲಿ ಹೆಚ್ಚು ಸಕ್ರಿಯವಾಗಿ ಭಾಗವಹಿಸಲು ಪ್ರೋತ್ಸಾಹಿಸಲಾಗುವುದಿಲ್ಲ. ಇದನ್ನು ಸಂಪೂರ್ಣವಾಗಿ ಬದಲಿಸಲು ನಾವು ಬಯಸುತ್ತೇವೆ. ಪ್ರತಿಯೊಬ್ಬರು ಎರಡು ವಿಭಾಗಕ್ಕೆ ಆಯ್ಕೆಯಾಗುವ, ಯಾವುದರಲ್ಲಿ ಪದವಿಯನ್ನು ಪಡೆದಿರುತ್ತಾರೊ ಅದು ಮತ್ತು ಅವರಿಗೆ ಯಾವುದರಲ್ಲಿ ಆಸಕ್ತಿಯಿರುತ್ತದೊ ಅಥವಾ ಯಾವ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೆಲಸ ಮಾಡಿರುತ್ತಾರೊ ಅದು, ಇಂತಹ ವಿಶ್ವವಿದ್ಯಾಲಯ ರಚನೆಯನ್ನು ಕಲ್ಪಿಸಿಕೊಳ್ಳಲು ನಾವು ಬಯಸುತ್ತೇವೆ. ಇದು ಸಹಜವಾಗಿ, ವಿಭಿನ್ನ ಸಂಯೋಜನೆಗಳ ಅಸಾಮಾನ್ಯ ರಚನೆಗೆ ಕಾರಣವಾಗುತ್ತದೆ. ಇದಲ್ಲದೆ ಯಾವುದೇ ವಿಭಾಗವು ಬೇರೆಯವರ ಪ್ರವೇಶಕ್ಕೆ ಅಡ್ಡಿಯನ್ನುಂಟುಮಾಡದಂತೆ ಪ್ರತಿಯೊಂದು ವಿಭಾಗದಲ್ಲೂ ಕನಿಷ್ಟ ಪಕ್ಷ ಶೇಕಡ 25ರಷ್ಟು ಅನ್ಯ ವಿಷಯದಲ್ಲಿ ಪದವಿ ಪಡೆದಿರುವವರನ್ನು ಹೊಂದಿರಬೇಕೆಂದು ಬಯಸುತ್ತೇವೆ. ಇಂತಹ ಸರಳವಾದ ಆಡಳಿತ ಕಾರ್ಯರೀತಿಯಿಂದಾಗಿ ಪ್ರಾಧ್ಯಾಪಕರುಗಳಿಗೆ ಎರಡೂ ವಿಭಾಗದಲ್ಲಿ 'ಪೂರ್ಣ' ಹಕ್ಕು ದೊರೆತಂತಾದರೆ ಪ್ರತಿಯೊಂದು ವಿಭಾಗದಲ್ಲೂ ನಡೆಯುವ ಬೌದ್ಧಿಕ ಚರ್ಚೆ, ಸಿದ್ಧಪಡಿಸುವ ಪಠ್ಯಕ್ರಮ, ಸಮಂಜಸವೆಂದು ತೋರಿದ ಅಥವಾ ಮಾನ್ಯವೆಂದು ಪರಿಗಣಿಸಲಾದ ದೃಷ್ಟಿಕೋನಗಳು ಇವೆಲ್ಲವೂ ಸಂಪೂರ್ಣವಾಗಿ ಬದಲಾಗುತ್ತದೆ.

4. *ಪದವಿ ವಿದ್ಯಾರ್ಥಿಗಳಿಗೆ ಜಂಟಿ ಸಂಶೋಧನೆ.*

ಪ್ರಾಧ್ಯಾಪಕರುಗಳಿಗಿದ್ದ ಪರಿಸ್ಥಿತಿಯ ಹಾಗೆಯೇ ವಿದ್ಯಾರ್ಥಿಗಳಿಗೂ ಸಹ ಇರುತ್ತದೆ. ಅವರು ಸಾಮಾನ್ಯವಾಗಿ ಒಂದೇ ವಿಭಾಗದಲ್ಲಿ ಕೆಲಸ ಮಾಡುತ್ತಾರೆ, ಮತ್ತು ಅನೇಕ ವೇಳೆ ಮತ್ತೊಂದು ವಿಭಾಗದಲ್ಲಿ ಸಂಶೋಧನೆ ಮಾಡುವುದನ್ನು ಸಕ್ರಿಯವಾಗಿ ನಿರುತ್ಸಾಹಗೊಳಿಸಲಾಗುತ್ತದೆ. ಕೇವಲ ಕೆಲವೇ ವಿಶ್ವವಿದ್ಯಾಲಯಗಳಲ್ಲಿ ಮತ್ತು ಕೆಲವೇ ವಿಭಾಗಗಳಲ್ಲಿ ವಿದ್ಯಾರ್ಥಿಗಳು ಹಾಗೆ ಮಾಡುವುದಕ್ಕೆ ಅನುಮತಿ ಇದೆ. ಇದನ್ನೂ ಸಹ ನಾವು ಬದಲಿಸುತ್ತೇವೆ. ಒಂದು ನಿರ್ದಿಷ್ಟ ಅಧ್ಯಯನ ಶಿಸ್ತಿನಲ್ಲಿ ಡಾಕ್ಟೋರೇಟ್ ಮಾಡುತ್ತಿರುವ ವಿದ್ಯಾರ್ಥಿಗೆ ಮತ್ತೊಂದು ವಿಭಾಗಕ್ಕೆ ಸೇರಿದ್ದೆನ್ನಲಾದ ಕೆಲವು ನಿರ್ದಿಷ್ಟ ಸಂಖ್ಯೆಯ ಕೋರ್ಸುಗಳನ್ನು ತೆಗೆದುಕೊಳ್ಳುವುದನ್ನು, ಅಥವಾ ಸ್ವಲ್ಪ ಮಟ್ಟಿನ ಸಂಶೋಧನೆಯನ್ನು ಮಾಡುವುದನ್ನು ಏಕೆ ಕಡ್ಡಾಯ ಮಾಡಬಾರದು? ಇದರಿಂದಲೂ ಸಹ ಅಸಂಖ್ಯಾತ ವಿವಿಧ ಸಂಯೋಜನೆಗಳು ಜನ್ಮ ತಾಳುತ್ತವೆ. ಉದಾರವಾದ ಆದರೆ ಗಂಭೀರವಾದ ರೀತಿಯಲ್ಲಿ ಇದನ್ನು ಕಾರ್ಯಗತಗೊಳಿಸಿದರೆ ಇದು ವರ್ತಮಾನವನ್ನು ಹಾಗೂ ಭವಿಷ್ಯವನ್ನು ಬದಲಿಸುತ್ತದೆ.

Source: *Open the Social Sciences: Report of the Gulbenkian Commission on the Restructuring of the Social Sciences,* Stanford, Calif., Stanford University Press, 1996. Reproduced by courtesy of Stanford University Press

ಸಾರ್ವಜನಿಕ ನೀತಿಯ ವಲಯದಲ್ಲಿ ಕಂಡುಬಂದ ಕಳಪೆ ಫಲಿತಾಂಶಗಳಿಗೆ ಸಮಾಜ ವಿಜ್ಞಾನಿಗಳು ಅಳವಡಿಸಿಕೊಂಡಿದ್ದ ನ್ಯೂಟೋನಿಯನ್ ಯಂತ್ರಶಾಸ್ತ್ರದ ಅಧ್ಯಯನ ವಿಧಾನ ಹಾಗೂ ಸೈದ್ಧಾಂತಿಕ ಗೃಹೀತಗಳು ಕಾರಣವೇ ವಿನಹಃ ಕ್ಷೇತ್ರಾಧ್ಯಯನ ಸಂಶೋಧಕರಾಗಿ ಅವರು ವಿಫಲರಾಗಿದ್ದಾರೆ ಎಂದಲ್ಲ ಎನ್ನುವ ಸಾಧ್ಯತೆಯನ್ನು ತೋರಿಸುದದರಿಂದ ನ್ಯೂಟೋನಿಯನ್ ಯಂತ್ರಶಾಸ್ತ್ರದ ಮೇಲಿನ (ಬೌದ್ಧಿಕ) ದಾಳಿಯು ಸಮಾಜ ವಿಜ್ಞಾನಿಗಳ ಸಾಮೂಹಿಕ ಮನೋಭಾವನೆಯಲ್ಲಿ ಮಹತ್ತರ ಬದಲಾವಣೆಯನ್ನು ತಂದಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಇದುವರೆಗೆ ಬಹಳ ತೀವ್ರವಾಗಿ ನಿರಾಕರಿಸಿದ್ದ ಸಾಮಾಜಿಕ ಜಗತ್ತು ಎನ್ನುವುದು

ಸ್ವಾಭಾವಿಕವಾಗಿಯೇ ಅನಿಶ್ಚಿತವಾದುದು ಎನ್ನುವ ಸಾಮಾನ್ಯಜ್ಞಾನದ ಪ್ರತಿಪಾದನೆಯನ್ನು ಬಹಳ ಗಂಭೀರವಾಗಿ ಪರಿಗಣಿಸಲು ಸಮಾಜವಿಜ್ಞಾನಿಗಳಿಗೆ ಈಗ ಸಾಧ್ಯವಾಯಿತು.

ಸ್ವೀಕೃತ ನಿಯಮಗಳ ಆಧಾರದ ಮೇಲೆ ಪಠ್ಯಗಳನ್ನು ಅರ್ಥೈಸುವುದರ ವಿರುದ್ಧ ನಡೆದ (ಬೌದ್ಧಿಕ) ದಾಳಿಯು ಸಮಾಜ ವಿಜ್ಞಾನಿಗಳ ಮುಂದೆ ತೆರೆದಿಟ್ಟ ಸಾಧ್ಯತೆಗಳೆಂದರೆ: (1) ತಮ್ಮ ವಿವರಣೆ, ಪ್ರತಿಪಾದನೆ ಮತ್ತು ಪುರಾವೆಗಳನ್ನು ಕುರಿತು ಆತ್ಮಾವಲೋಕನ ಮಾಡಿಕೊಳ್ಳುವ ಹೊಣೆಗಾರಿಕೆ, ಹಾಗೂ (2) ತಮ್ಮ ಕೃತಿಯಲ್ಲಿ ಅನಿವಾರ್ಯವಾಗಿರುವ ನಿಲುವಿನ ಪಕ್ಷಪಾತವನ್ನು ಸಾಮಾಜಿಕ ವಾಸ್ತವದ ಕುರಿತು ಸಮಂಜಸವೆಂದು ತೋರುವ ಹೇಳಿಕೆಗಳನ್ನು ಮಾಡಬಲ್ಲ ಸಾಧ್ಯತೆಯೊಂದಿಗೆ ಹೊಂದಾಣಿಕೆ ಮಾಡುವ ಪ್ರಯತ್ನ.

ಹೀಗೆ, ನಾವು ಸಮಾಜ ವಿಜ್ಞಾನದಲ್ಲಿನ ಅಧ್ಯಯನ ಶಿಸ್ತುಗಳ ಗಡಿಗಳ ಸ್ವೀಕಾರಾರ್ಹತೆಯನ್ನು ಕುರಿತು ಸಾಕಷ್ಟು ಅನಿಶ್ಚಿತತೆಯ ಭಾವದಿಂದಲೇ ಇಪ್ಪತ್ತೊಂದನೇ ಶತಮಾನವನ್ನು ಪ್ರವೇಶಿಸುತ್ತೇವೆ. ಅಲ್ಲದೆ, 'ಎರಡು ಸಂಸ್ಕೃತಿಗಳ' ನಡುವಿನ ಜ್ಞಾನಮೀಮಾಂಸೆಯ ವಿಭಜನೆಯ ಬಗೆಗಿದ್ದ ಸಹಮತತೆ, ಮತ್ತು ಆ ಕಾರಣದಿಂದ ಜ್ಞಾನವು ನೈಸರ್ಗಿಕ ವಿಜ್ಞಾನ, ಮಾನವಿಕಗಳು, ಮತ್ತು 'ಇವೆರಡರ ನಡುವಿನ' ಸಮಾಜ ವಿಜ್ಞಾನಗಳೆಂಬ ಮೂರು ಅಸಾಮಾನ್ಯ ಪ್ರವರ್ಗಗಳಾಗಿ ಮೂರುಪಟ್ಟು ವಿಭಜಿತವಾದದ್ದನ್ನು ಕುರಿತು ಕಳೆದ ಎರಡು ಶತಮಾನಗಳಲ್ಲಿ ಮೊದಲ ಬಾರಿಗೆ ಗಂಭೀರವಾದ ಪ್ರಶ್ನೆಗಳೆದ್ದಿವೆ. ಶೈಕ್ಷಣಿಕ ಸಂಸ್ಥೆಯಾಗಿ ವಿಶ್ವವಿದ್ಯಾಲಯವು ಮಹತ್ತರವಾದ ಬದಲಾವಣೆಗೊಳಗಾಗುತ್ತಿರುವ ಕಾಲಘಟ್ಟದಲ್ಲೇ ಇದು ಘಟಿಸುತ್ತಿದೆ. ಈ ತ್ರಿವಿಧ ಸಂರಚನೆಯನ್ನು ಈ ಅಧ್ಯಾಯವು ಪರಿಶೀಲಿಸುತ್ತದೆ. ಮೊದಲಿಗೆ, ಎರಡು ಸಂಸ್ಕೃತಿಗಳ ವಿಷಯದೆಡೆಗೆ ಗಮನ ಹರಿಸಿ, ನಂತರ ಸಮಾಜ ವಿಜ್ಞಾನಗಳನ್ನು ಮರುರಚಿಸುವ ಸಾಧ್ಯತೆಯನ್ನು ಮತ್ತು ಕೊನೆಯದಾಗಿ, ಇವೆರಡು ಬದಲಾವಣೆಗಳು ವಿಶ್ವವಿದ್ಯಾಲಯ ವ್ಯವಸ್ಥೆಗೆ ಹೇಗೆ ಸಂಬಂಧಿಸಿವೆ ಎನ್ನುವುದನ್ನು ಪರಿಶೀಲಿಸಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ 'ವಿಜ್ಞಾನ ಸಂಘರ್ಷ' ಮತ್ತು 'ಸಂಸ್ಕೃತಿ ಸಂಘರ್ಷಗಳು' ಹುಟ್ಟು ಹಾಕಿರುವ ಭಾವೋದ್ರೇಕಗಳು ಸಧ್ಯದಲ್ಲಿ ನಡೆಯುತ್ತಿರುವ ಎಲ್ಲ ಚರ್ಚೆಗಳಿಗೆ ಜ್ಞಾನಮೀಮಾಂಸೆಯ ಚರ್ಚಾಂಶಗಳು ಎಷ್ಟು ಮೂಲಭೂತವಾದದ್ದು ಎನ್ನುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಸಾಮಾನ್ಯವಾಗಿ, ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವವರಿಗೆ ಗಮನಾರ್ಹವಾದ ಬದಲಾವಣೆಗಳನ್ನು ಪ್ರತಿಪಾದಿಸಲಾಗುತ್ತಿದೆ ಮತ್ತು ಅದು ನಿಜವಾಗಿಯೂ ಘಟಿಸುತ್ತದೆ ಎಂದು ನಂಬಿದರೆ, ಅದು ಸರಿಯೊ ತಪ್ಪೊ, ಭಾವೋದ್ರೇಕಗಳು ಹೆಚ್ಚಾಗುತ್ತವೆ. ಆದರೆ ಪರಿಶೀಲನೆಗೊಳಪಡುತ್ತಿರುವ ಚರ್ಚಾಂಶಗಳನ್ನು ಅರ್ಥ ಮಾಡಿಕೊಳ್ಳಲಾಗಲಿ ಅಥವಾ ಪರಿಹಾರಗಳನ್ನು ಕಂಡುಕೊಳ್ಳಲಾಗಲಿ ಭಾವೋದ್ರೇಕಗಳು ಅಗತ್ಯವಾಗಿ ಸರಿಯಾದ ಮಾರ್ಗವಲ್ಲ.

## ಎರಡು ಸಂಸ್ಕೃತಿಗಳು

ಬಹಳ ಕಾಲದಿಂದಲೂ ತತ್ವಶಾಸ್ತ್ರ ಮತ್ತು ವಿಜ್ಞಾನದ ನಡುವಿನ 'ಬೇರ್ಪಡುವಿಕೆ'ಯಲ್ಲಿ ಒಂದು ಪ್ರಮುಖ ಸಮಸ್ಯೆ ಇತ್ತು. ಹದಿನೆಂಟನೇ ಶತಮಾನಕ್ಕೂ ಮೊದಲು ದೇವತಾಶಾಸ್ತ್ರ ಮತ್ತು

ತತ್ವಶಾಸ್ತ್ರಗಳೆರಡೂ ಸಾಂಪ್ರದಾಯಿಕವಾಗಿ ತಮಗೆ ಒಂದಲ್ಲ ಎರಡು ಸತ್ಯಗಳನ್ನು ಅಂದರೆ ಯಾವುದು ಸತ್ಯ ಹಾಗೂ ಯಾವುದು ಒಳಿತು ಎಂದು ತಿಳಿದುಕೊಳ್ಳುವ ಸಾಮರ್ಥ್ಯವಿದೆ ಎಂದು ಪ್ರತಿಪಾದಿಸಿದ್ದವು. ಪ್ರಾಯೋಗಿಕ ವಿಧಾನದ ವಿಜ್ಞಾನ (empirical science) ಕ್ಕೆ ಸತ್ಯವನ್ನು ಗ್ರಹಿಸಲು ಮಾತ್ರ ಸಾಧನಗಳಿವೆಯೇ ಹೊರತು ಒಳ್ಳೆಯದು ಕೆಟ್ಟದ್ದು ಎಂಬ ವ್ಯತ್ಯಾಸ ತಿಳಿಯಬಲ್ಲ ಸಾಧನಗಳು ಇಲ್ಲವೆಂದು ಭಾವಿಸಿತು. ಈ ತೊಡಕನ್ನು ವಿಜ್ಞಾನಿಗಳು ಹುಂಬ ವಿಶ್ವಾಸದಿಂದಲೇ ಎದುರಿಸಿದರು. ಅವರು ಕೇವಲ ಸತ್ಯವನ್ನು ಖಚಿತಪಡಿಸುವ ಪ್ರಯತ್ನ ಮಾಡುತ್ತೇವೆ ಎಂದು ಮತ್ತು ಒಳಿತಿಗಾಗಿನ ಹುಡುಕಾಟವನ್ನು ತತ್ವಶಾಸ್ತ್ರಜ್ಞರಿಗೆ (ಮತ್ತು ದೇವತಾಶಾಸ್ತ್ರಜ್ಞರಿಗೆ) ಬಿಡುವುದಾಗಿ ಹೇಳಿದರು. ಇದನ್ನು ಪ್ರಜ್ಞಾಪೂರ್ವಕವಾಗಿ ತಮ್ಮನ್ನು ಸಮರ್ಥಿಸಿಕೊಳ್ಳುವ ಸಲುವಾಗಿ ಮತ್ತು ಸ್ವಲ್ಪ ಅಸಡ್ಡೆಯಿಂದಲೇ ಅವರು ಮಾಡಿದರು. ಅವರು ಸತ್ಯವನ್ನು ಅರಿಯುವುದೇ ಬಹಳ ಮುಖ್ಯ ಎಂದು ಸಾಧಿಸಿದರು. ಅಂತಿಮವಾಗಿ ಕೆಲವರು ಯಾವುದು ಸತ್ಯ ಎನ್ನುವುದಷ್ಟೇ ನಮಗೆ ತಿಳಿಯಲು ಸಾಧ್ಯವೇ ಹೊರತು ಒಳಿತನ್ನು ನಿರ್ಧರಿಸುವುದು ಅಸಾಧ್ಯ ಎಂಬ ನಿಲುವನ್ನೂ ತಾಳಿದರು. ಸತ್ಯ ಮತ್ತು ಒಳಿತುಗಳ ನಡುವಿನ ಈ ವಿಭಜನೆಯು 'ಎರಡು ಸಂಸ್ಕೃತಿಗಳ' ತರ್ಕದ ಅಡಿಪಾಯವನ್ನು ನಿರ್ಮಿಸಿತು. ತತ್ವಶಾಸ್ತ್ರವನ್ನು (ಅಥವಾ ವಿಶಾಲಾರ್ಥದಲ್ಲಿ ಮಾನವಿಕಗಳು) ಒಳಿತಿನ (ಮತ್ತು ಸೌಂದರ್ಯದ) ಹುಡುಕಾಟಕ್ಕೆ ಸೀಮಿತಗೊಳಿಸಲಾಯಿತು. ಸತ್ಯದ ಹುಡುಕಾಟ ತನಗಷ್ಟೇ ಸಾಧ್ಯ ಎಂದು ವಿಜ್ಞಾನವು ಒತ್ತಿ ಹೇಳಿತು.

ಆದಾಗ್ಯೂ, ಸತ್ಯ ಹಾಗೂ ಒಳಿತಿನ ಹುಡುಕಾಟದ ಚಟುವಟಿಕೆಯ ನಡುವಿನ ವಿಭಜನೆಯನ್ನು ಸ್ಥಾಪಿಸಲು ವಿದ್ವಾಂಸರುಗಳು ಎಷ್ಟೇ ಪ್ರಯತ್ನಿಸಿದರೂ ಸಹ ವಾಸ್ತವದಲ್ಲಿ ಕೆಲವರಿಗೆ ಅವರ ಹುಡುಕಾಟವನ್ನು ಬೇರ್ಪಡಿಸುವ ಇಚ್ಛೆ ಇರಲಿಲ್ಲ. ಅದರಲ್ಲೂ ವಿಶೇಷವಾಗಿ ಸಾಮಾಜಿಕ ವಾಸ್ತವ ಅಧ್ಯಯನದ ವಿಷಯವಾಗಿದ್ದಾಗ ಅವರ ಮನೋಭಾವನೆ ಅದಕ್ಕೆ ವಿರುದ್ಧವಾಗಿತ್ತು. ಅನೇಕ ರೀತಿಯಲ್ಲಿ, ಸಮಾಜ ವಿಜ್ಞಾನದ ಸಾಂಸ್ಥಿಕ ಇತಿಹಾಸದುದ್ದಕ್ಕೂ ಸತ್ಯ ಹಾಗೂ ಒಳಿತಿನ ಹುಡುಕಾಟಗಳನ್ನು ಪರಸ್ಪರ ಸಮನ್ವಯಗೊಳಿಸಬಹುದೇ ಎನ್ನುವುದು ಮುಖ್ಯ ಚರ್ಚಾ ವಿಷಯವಾಗಿತ್ತು. ಅನೇಕ ವೇಳೆ, ಈ ಎರಡೂ ಹುಡುಕಾಟಗಳನ್ನು ಮತ್ತೆ ಒಗ್ಗೂಡಿಸುವ ಈ ಬಯಕೆಯು, ವಿಜ್ಞಾನಿಗಳ ಮತ್ತು ತತ್ವಶಾಸ್ತ್ರಜ್ಞರ ಸಂಶೋಧನೆಯಲ್ಲಿ, ಕೆಲವೊಮ್ಮೆ ಅದರ ಅಪೇಕ್ಷಣೀಯತೆ ಅಥವಾ ಸಾಧ್ಯತೆಯನ್ನೂ ಸಹ ನಿರಾಕರಿಸುವುದರಲ್ಲಿ ಅವರು ನಿರತರಾಗಿರುವಾಗಲೂ, ಗುಟ್ಟಾಗಿ ಮರುಳಿದವು. ಆದರೆ ಹುಡುಕಾಟವು ಗುಟ್ಟಾಗಿದ್ದುದರಿಂದ ಅಂತಹ ಪ್ರಯತ್ನವನ್ನು ಮೌಲ್ಯಮಾಪನ ಮಾಡುವ, ವಿಮರ್ಶಿಸುವ ಮತ್ತು ಅಭಿವೃದ್ಧಿಪಡಿಸುವ ನಮ್ಮ ಸಾಮೂಹಿಕ ಸಾಮರ್ಥ್ಯವನ್ನು ಅದು ಕುಂಠಿತಗೊಳಿಸಿತು.

ಮುಂದಿನ ಇಪ್ಪತ್ತೈದರಿಂದ ಐವತ್ತು ವರ್ಷಗಳಲ್ಲಿ 'ಎರಡು ಸಂಸ್ಕೃತಿಗಳನ್ನು ಮೀರುವ' ಯೋಜನೆಯ ಹಾದಿಯಲ್ಲಿ ನಾವು ಎಷ್ಟು ದೂರ ಸಾಗಬಹುದು ಎನ್ನುವದರ ಬಗ್ಗೆ ಖಾತ್ರಿಯಿಲ್ಲ. ಯಾರೂ ಸಹ ಯಾವುದೇ ರೀತಿಯಲ್ಲಿ ಈ ಯೋಜನೆಯಲ್ಲಿ ತೊಡಗಿಕೊಳ್ಳಲು ಸಿದ್ಧರಿಲ್ಲ. ಪರಿಸ್ಥಿತಿ ಅದಕ್ಕೆ ಪ್ರತಿಕೂಲವಾಗಿದೆ. ನೈಸರ್ಗಿಕ ವಿಜ್ಞಾನ ಮತ್ತು ಮಾನವಿಕಗಳು ಇವೆರಡರಲ್ಲಿ ಹಾಗೂ ಅದರ ಪರಿಣಾಮವಾಗಿ ಸಮಾಜ ವಿಜ್ಞಾನಗಳಲ್ಲಿ ಕೂಡ ಜ್ಞಾನಮೀಮಾಂಸೆಯ ಈ ವಿಭಜನೆಗಿರುವ ನಿರಂತರ ಸಹಮತತೆಯನ್ನು ಬೆಂಬಲಿಸುವ ನಿಷ್ಠಾವಂತರು ಅನೇಕರಿದ್ದಾರೆ.

ಇಪ್ಪತ್ತನೆಯ ಶತಮಾನದ ಕಳೆದ ಮುವತ್ತು ವರ್ಷಗಳಲ್ಲಿ, ಅಸ್ತಿತ್ವದಲ್ಲಿರುವ ಈ ವಿಭಜನೆಯನ್ನು ವಿರೋಧಿಸುವ ಜ್ಞಾನ ಪ್ರವೃತ್ತಿಗಳು, ಕಳೆದೆರಡು ಶತಮಾನಗಳಲ್ಲಿ ಮೊದಲ ಬಾರಿಗೆ, ವ್ಯಾಪಕ ಬೆಂಬಲದಿಂದ ಗಂಭೀರ ಸ್ವರೂಪವನ್ನು ಪಡೆದುಕೊಂಡಿದೆ ಮತ್ತು ಅದು ವಿಸ್ತರಿಸುತ್ತಾ ಇದೆ.

ಪ್ರತಿ ಪ್ರವೃತ್ತಿಯೂ ತಮ್ಮೊಳಗಿನ ಗುಂಪು/ ಶಾಖೆ /ಅಸಾಮಾನ್ಯ-ಶಿಸ್ತುಗಳಿಂದ ಬರುತ್ತಿರುವ ತೀವ್ರ ವಿರೋಧವಲ್ಲದೆ ಪ್ರಸ್ತುತದಲ್ಲಿ ಈ ಎರಡೂ ಪ್ರವೃತ್ತಿಗಳು ಎದುರಿಸುತ್ತಿರುವ ಬಹು ದೊಡ್ಡ ಸಮಸ್ಯೆ ಎಂದರೆ ಅವು ಪ್ರತಿಯೊಂದು ಈ ಹಿಂದೆ ಪ್ರಶ್ನಿಸದ ಮತ್ತು ಚಾಲ್ತಿಯಲ್ಲಿರುವ ಸಾಂಪ್ರದಾಯಿಕತೆಯ ವಿರುದ್ಧ ತಾವು ಮಾಡುತ್ತಿರುವ ಟೀಕೆಗಳಿಗಿರುವ ಸ್ವೀಕಾರಾರ್ಹತೆಯನ್ನು ದೃಢಪಡಿಸುವುದರ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿವೆ. ಸಂಕೀರ್ಣತಾ ಅಧ್ಯಯನಗಳಾಗಲಿ, ಸಾಂಸ್ಕೃತಿಕ ಅಧ್ಯಯನಗಳಾಗಲಿ ಇತ್ತ ನೊಮೊಥೆಟಿಕ್ ವಿಧಾನವಲ್ಲದ ಅತ್ತ ಇಡಿಯೋಗ್ರಾಫಿಕ್ ವಿಧಾನವೂ ಅಲ್ಲದ, ಇತ್ತ ಸಾರ್ವತ್ರೀಕರಣವಲ್ಲದ (universalist) ಅತ್ತ ಏಕನಿಷ್ಠಾವಾದವೂ (particularist) ಅಲ್ಲದ, ಅತ್ತ ನಿಯತವಾದವಲ್ಲದ (determinist) ಇತ್ತ ಸಾಪೇಕ್ಷತಾವಾದವೂ (relativist) ಅಲ್ಲದ ಒಂದು ನಿಜವಾದ ಹೊಸ ಜ್ಞಾನಮೀಮಾಂಸೆಯನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಅವು ಪರಸ್ಪರ ಒಪ್ಪಂದಕ್ಕೆ ಬರಬಹುದೇ ಮತ್ತು ಹೇಗೆ ಬರಬಹುದು ಎಂದು ನೋಡುವ ಪ್ರಯತ್ನವನ್ನೇ ಮಾಡಿಲ್ಲ.

ಎರಡು ಪ್ರವೃತ್ತಿಗಳ ನಡುವೆ ಸಾಪೇಕ್ಷ ಸಂಬಂಧದ ಕೊರತೆ ಕೇವಲ ಸಾಂಸ್ಥಿಕ ಸಮಸ್ಯೆಯಲ್ಲ; ಬೌದ್ಧಿಕ ಭಿನ್ನತೆಯನ್ನೂ ಇದು ಪ್ರತಿಬಿಂಬಿಸುತ್ತದೆ. ಸಂಕೀರ್ಣತಾ ಅಧ್ಯಯನಗಳು ಇನ್ನೂ ವಿಜ್ಞಾನವಾಗಿಯೇ ಉಳಿಯಬೇಕೆಂದು ಬಯಸುತ್ತವೆ. ಸಾಂಸ್ಕೃತಿಕ ಅಧ್ಯಯನಗಳು ಇನ್ನೂ ಮಾನವಿಕಗಳಾಗಿರಲು ಇಚ್ಛಿಸುತ್ತವೆ. ವಿಜ್ಞಾನ ಹಾಗೂ ತತ್ವಶಾಸ್ತ್ರದ ನಡುವಿನ ವ್ಯತ್ಯಾಸವನ್ನು ಎರಡೂ ಸಹ ಸಂಪೂರ್ಣವಾಗಿ ತ್ಯಜಿಸಿಲ್ಲ. ಒಮ್ಮುಖವಾಗಿರುವ ಇವೆರಡು ಬೌದ್ಧಿಕ ಪ್ರವೃತ್ತಿಗಳು ಸಾಮಾನ್ಯಾಂಶ ಮತ್ತು ಸಾಮಾನ್ಯ ಭಾಷೆಯೊಂದನ್ನು ಕಂಡುಕೊಳ್ಳಲು ಬಹಳ ಕಾಲ ಬೇಕಾಗಬಹುದು. ಮತ್ತೊಂದೆಡೆ, ಜ್ಞಾನವನ್ನು ಅರಸುತ್ತಿರುವ ಲೋಕ ಸಮುದಾಯದೊಳಗಿನಿಂದ ಮತ್ತು ಪ್ರಪಂಚದಾದ್ಯಂತ ನಡೆಯುತ್ತಿರುವ ಸಾಮಾಜಿಕ ಚಳವಳಿಗಳಿಂದ ಬರುತ್ತಿರುವ ಸಾಮಾಜಿಕ ಒತ್ತಡ ತೀವ್ರವಾಗಿದೆ. ಏಕೆಂದರೆ ಹೆಚ್ಚು ಕಡಮೆ ಕಳೆದೆರಡು ಶತಮಾನಗಳಲ್ಲಿ ಪ್ರಚಲಿತವಾಗಿದ್ದ ಸಂಸ್ಕೃತಿಯ ಕುರಿತು ನಡೆದಿರುವ ಆದ್ಯಂತ ಪರಿಶೀಲನೆಯು ಬಹಳಷ್ಟು ವಿದ್ವಾಂಸರಲ್ಲಿ (ಇತರರ ಬಗ್ಗೆ ಹೇಳುವುದೇ ಬೇಡ) ಗೊಂದಲವನ್ನುಂಟುಮಾಡಿ ಅವರನ್ನು ಮೂಕಗೊಳಿಸಿದೆ. ಬಹುಶಃ ಈ ಹಿನ್ನಲೆಯಲ್ಲಿ ಸಮಾಜವಿಜ್ಞಾನಿಗಳು ವಿಶೇಷ ಪಾತ್ರ ವಹಿಸಬೇಕೆಂಬ ನಿರೀಕ್ಷೆ ಇದೆ. ರೂಢಿಗತ (normative – ಮೌಲ್ಯಮಾಪನ ಮಾನದಂಡಕ್ಕೆ ಸಂಬಂಧಿಸಿದ) ಚೌಕಟ್ಟುಗಳನ್ನು ನಿರ್ಮಿಸುವ ಸಮಸ್ಯೆಗೆ ಸಂಬಂಧಿಸಿದಂತೆ ಅವರು ವೃತ್ತಿಪರ ಪರಿಚಿತರಾಗಿರುತ್ತಾರೆ, ಮತ್ತು ಅವರ ಸಾಂಸ್ಥಿಕ ಇತಿಹಾಸದುದ್ದಕ್ಕೂ ಅವರು ಅಂತಹ ಪ್ರಕ್ರಿಯೆಗಳ ಅಧ್ಯಯನ ಮಾಡುತ್ತಲೇ ಬಂದಿದ್ದಾರೆ. ಇದಲ್ಲದೆ, ಜ್ಞಾನದ ಈ ಎರಡು ಪ್ರವೃತ್ತಿಗಳ ಒಮ್ಮುಖ ಪಥಗಳು ನೈಸರ್ಗಿಕ ವಿಜ್ಞಾನ ಹಾಗೂ ಮಾನವಿಕಳೆರಡನ್ನೂ, ಸಮಾಜ ವಿಜ್ಞಾನದ ನೈಪುಣ್ಯತೆಯನ್ನು, ಅದು ಈಗಿರುವಂತೆ, ಅಳವಡಿಸಿಕೊಳ್ಳುವ ಸಾಧ್ಯತೆ ಇರಬಹುದಾದ ಸಮಾಜ ವಿಜ್ಞಾನಗಳ ಕ್ಷೇತ್ರಕ್ಕೆ ಎಳೆದೊಯ್ಯುತ್ತಿದೆ.

ಹೊಸ ಜ್ಞಾನಮೀಮಾಂಸೆಯ ಒಮ್ಮತವನ್ನು ಕುರಿತು ಸ್ಪಷ್ಟ ಸೂಚನೆಗಳು ಸಧ್ಯದಲ್ಲಿ ಕಾಣಿಸುತ್ತಿಲ್ಲ. ಆ ದಿಕ್ಕಿನಲ್ಲಿ ಇದೂವರೆಗೂ ನಡೆದ ಪ್ರಯತ್ನಗಳಿಗಿಂತ ಹೆಚ್ಚು ತೃಪ್ತಿಕರವಾದ ರೀತಿಯಲ್ಲಿ ಬಹಳ ಕಾಲದಿಂದಲೂ ಉಳಿದುಕೊಂಡು ಬಂದಿರುವ ಚರ್ಚಾಂಶಗಳ ಮೇಲೆ ಗಮನ ಹರಿಸಬೇಕಾಗಿದೆ:

1. ವಿಶ್ವವು ಏಕಕಾಲದಲ್ಲಿ ನಿಜವಾಗಿದೆ ಮತ್ತು ನಿರಂತರವಾಗಿ ಬದಲಾಗುತ್ತಲೂ ಇದೆ ಎಂದುಕೊಂಡರೆ, ಒಬ್ಬ ವ್ಯಕ್ತಿಯ ಮತ್ತೆ ಪುನರಾವರ್ತನೆಯಾಗದ ಒಂದು ಕ್ಷಣದ ಭಂಗಿಯ ಫಕ್ಕನೆ ಹಿಡಿದ (snapshot) ಛಾಯಾಚಿತ್ರಕ್ಕಿಂತ ಮಿಗಿಲಾಗಿ ಹೆಚ್ಚು ಸಾಮಾನ್ಯವಾದ ಯಾವುದೇ ಒಂದು ವಾಸ್ತವವನ್ನು ಗ್ರಹಿಸುವುದು ಹೇಗೆ ಸಾಧ್ಯ? ಮತ್ತು ಇನ್ನೂ, ಸ್ವಲ್ಪಮಟ್ಟಿಗಾದರೂ ಸರಿ ಎನಿಸುವ ರೀತಿಯಲ್ಲಿ ಅದನ್ನು ಮಾಡಲಾಗದಿದ್ದರೆ ವಿದ್ವತ್ ಚಟುವಟಿಕೆಯಲ್ಲಿ ತೊಡಗಿಕೊಳ್ಳುವುದಕ್ಕೆ ಅರ್ಥವಿದೆಯೇ?
2. ಗ್ರಹಿಕೆಯ ಮೇಲೆ ಗ್ರಹಿಸುವವನು, ಮಾಪನದ ಮೇಲೆ ಮಾಪಕನು ಎಷ್ಟರಮಟ್ಟಿಗೆ ಪರಿಣಾಮ ಬೀರುತ್ತಾನೆ ಎನ್ನುವುದರ ಮಾಪನ ಮಾಡುವುದು ಹೇಗೆ? ಇಲ್ಲಿ ಹೈಸೆನ್‌ಬರ್ಗ್ (Heisenberg) ನ ಅನಿಶ್ಚಿತತೆಯ ತತ್ವ ಎದ್ದು ಕಾಣುತ್ತದೆ. ಒಂದೆಡೆ ವೀಕ್ಷಕನು ತಟಸ್ಥನಾಗಿರಲು ಸಾಧ್ಯವಿದೆ ಎನ್ನುವ ತಪ್ಪು ತಿಳಿವಳಿಕೆ, ಮತ್ತೊಂದೆಡೆ ಎಲ್ಲ ವೀಕ್ಷಕರು ತಮ್ಮ ಗ್ರಹಿಕೆಯಲ್ಲಿ ಪಕ್ಷಪಾತಿಯಾಗಿರುತ್ತಾರೆ ಎನ್ನುವ ಅಷ್ಟೇನು ಉಪಯುಕ್ತವಲ್ಲದ ತಿಳಿವಳಿಕೆ ಇವೆರಡನ್ನೂ ಮೀರಿ ಮುಂದೆ ಹೋಗುವುದು ಹೇಗೆ?
3. ಎಲ್ಲ ತುಲನೆಗಳೂ ಸಮಾನರೂಪತೆಗಳು ಮತ್ತು ವ್ಯತ್ಯಾಸಗಳನ್ನು ಕುರಿತಾಗಿವೆ ಎಂದಾದರೆ, ಮತ್ತು ಸಮಾನರೂಪತೆಗಳು ಹೊರತುಪಡಿಸುವ ವ್ಯಾಖ್ಯಾನಗಳ ಮೇಲೆ ಆಧಾರಿತವಾಗಿದ್ದು ಮತ್ತು ವ್ಯತ್ಯಾಸಗಳಿಗೆ ಅಂತ್ಯವೇ ಇಲ್ಲ ಎನ್ನುವುದು ದತ್ತವಾಗಿರುವುದರಿಂದ ಸಮಾನರೂಪತೆಗಳು ಹಾಗೂ ವ್ಯತ್ಯಾಸಗಳನ್ನು ನಿರ್ಧರಿಸಲು ಯಾವ ರೀತಿಯದ ಸಮಂಜಸವೆಂದು ತೋರುವ ಮಾನದಂಡಗಳನ್ನು ನಾವು ರೂಪಿಸಬಹುದು?
4. ಈ ವಿಶ್ವದಲ್ಲಿ ನಾವು ಕಂಡುಕೊಳ್ಳುತ್ತಿರುವ ಸಣ್ಣ ಹಾಗೂ ಬೃಹತ್ ಅಸ್ತಿತ್ವಗಳಿಗೆ ಕೊನೆಯೇ ಇಲ್ಲದಿರುವಾಗ, ಮತ್ತು ಸಮಸ್ತ ಘಟನೆಗಳಿಗೂ ಸಂದರ್ಭವನ್ನು ಸೃಷ್ಟಿಸುತ್ತಿರುವ ವಿಶ್ವವು ಸೀಮಾತೀತವಾಗಿರುವ ಪರಿಸ್ಥಿತಿಯಲ್ಲಿ ಇಡೀ ವಿಶ್ವವನ್ನು ಮತ್ತು ಅದರ ಎಲ್ಲ ಭಾಗಗಳನ್ನು ಗ್ರಹಿಕೆಗೆ ನಿಲುಕುವಂತೆ ನಮಗೆ ಸಹಾಯ ಮಾಡುವ ಸಮಂಜಸವೆಂದು ತೋರುವ ಅರ್ಥಪೂರ್ಣ ವಿಶ್ಲೇಷಣಾ ಘಟಕಗಳಾವುವು?

ಸ್ಪಷ್ಟವಾಗಿ ನಮಗೆ ಕಾಣಿಸುವಂತೆ ಇವೆಲ್ಲವೂ ತಾತ್ವಿಕ ಪ್ರಶ್ನೆಗಳು, ಹಾಗೆಯೆ ಅವು ವೈಜ್ಞಾನಿಕವೂ ಕೂಡ. ಈ ಎಲ್ಲ ಪ್ರಶ್ನೆಗಳಿಗೆ ಎರಡು ಬಗೆಯ ಉತ್ತರಗಳ ಸಮುಚ್ಚಯಗಳು ಹಾಗೂ ಎರಡು ಚರ್ಚಾಕ್ಷೇತ್ರಗಳಿರಲು ಸಾಧ್ಯವಿದೆಯೆ? ಇವೆಲ್ಲಾ ಪ್ರಶ್ನೆಗಳು ಇಪ್ಪತ್ತೊಂದನೇ ಶತಮಾನದಲ್ಲಿಯೇ ಪರಿಹಾರವನ್ನು ಕಂಡುಕೊಳ್ಳುತ್ತವೆ ಎಂದು ನಾವು ಹೇಳಲಾರೆವು. ಆದರೆ ಜ್ಞಾನದ ರಚನೆಗಳು ಅವುಗಳ ಬಗ್ಗೆ ಮೂಡುವ ತಾತ್ಕಾಲಿಕ ಒಮ್ಮತದ ಮೇಲೆ ನಿಂತಿದೆ. ಮತ್ತು ಜ್ಞಾನದ ತ್ರಿವಿಧ ವಿಭಜನೆಯ ಮೇಲೆ ಸಧ್ಯದಲ್ಲಿ ನಡೆಯುತ್ತಿರುವ (ಬೌದ್ಧಿಕ) ದಾಳಿಯ ಪರಿಣಾಮವಾಗಿ ಇನ್ನು ಇಪತ್ತೈದು-ಐವತ್ತು ವರ್ಷಗಳಲ್ಲಿ ಒಂದು ಹೊಸ ತಾತ್ಕಾಲಿಕ ಒಮ್ಮತ

ಮೂಡುವುದು ಅಸಾಧ್ಯವೇನೂ ಅಲ್ಲ. ಇದಲ್ಲದೆ, ಹಾಗೆ ಆದಲ್ಲಿ, ಅದು ವಿಶ್ವವಿದ್ಯಾಲಯ ವ್ಯವಸ್ಥೆಯ (ಅಂದರೆ ಶಾಖೆಗಳು) ಹಾಗೂ ವಿದ್ವತ್‌ಪೂರ್ಣ ಸಂಶೋಧನೆಯ ವ್ಯವಸ್ಥೆಯನ್ನು ಒಂದು ಸಾವಯವ ಸಮಷ್ಟಿಯನ್ನಾಗಿ ರಚಿಸುವುದರ ಮೇಲೆ ಅಗಾಧ ಪರಿಣಾಮ ಬೀರುತ್ತದೆ. ಈ ತ್ರಿವಿಧದ ರಚನೆ ಕುಸಿದು ಹೋದರೆ, ಆಗ ನಾವು ಕೇಳಬೇಕಾದುದೇನೆಂದರೆ: ನಾವು ಈಗ ಯಾವುದನ್ನು ಸಮಾಜ ವಿಜ್ಞಾನಗಳೆಂದು ಕರೆಯುತ್ತಿದ್ದೇವೆಯೊ ಅವುಗಳಿಗೆ ಮರುಸಂಘಟಿತ ಯೋಜನೆಯಲ್ಲಿ ನೀಡಬಹುದಾದ ಯೋಗ್ಯವಾದ ಸ್ಥಾನ ಯಾವುದು?

## ಸಮಾಜ ವಿಜ್ಞಾನಗಳ ಅಧ್ಯಯನ ಶಿಸ್ತುಗಳು

ಜ್ಞಾನದ ವರ್ಗೀಕರಣಗಳಾಗಿ ಪ್ರಮುಖ ಸಮಾಜ ವಿಜ್ಞಾನ ಅಧ್ಯಯನ ಶಿಸ್ತುಗಳು ಒಳಗೊಂಡಿರುವ ಬೌದ್ಧಿಕ ವ್ಯತ್ಯಾಸಗಳ ದೌರ್ಬಲ್ಯಗಳೇನೇ ಇರಲಿ, ಅವು ಸಾಂಸ್ಥಿಕವಾಗಿ ಪ್ರಬಲವಾಗಿವೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ವಾಸ್ತವವಾಗಿ, ಅವು ತಮ್ಮ ಸಾಮರ್ಥ್ಯದ ತುಟ್ಟತುದಿಯನ್ನು ತಲುಪಿರುವ ಸಾಧ್ಯತೆಯೂ ಇದೆ. ಈಗಿನ ವಿದ್ವಾಂಸರುಗಳು ಅದರಲ್ಲೂ ವಿಶೇಷವಾಗಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಮತ್ತು ಉನ್ನತ ಪದವಿಗಳ ಅಭ್ಯಾಸ ಮಡುತ್ತಿರುವ ಸ್ನಾತಕ ಪದವಿ ವಿದ್ಯಾರ್ಥಿಗಳು ಈ ಸಾವಯವ ಸಮಷ್ಟಿ ರಚನೆಯ ಪ್ರವರ್ಗಗಳಿಗೆ ಸಂಬಂಧಿಸಿದಂತೆ ಗಣನೀಯವಾಗಿ ವೈಯಕ್ತಿಕ ಆಸಕ್ತಿಯನ್ನು ಹೊಂದಿರುತ್ತಾರೆ. ಅವರು ನಿರ್ದಿಷ್ಟ ಅಧ್ಯಯನ ಶಿಸ್ತುಗಳಲ್ಲಿ ಪದವಿಯನ್ನು ಪಡೆದುಕೊಂಡಿರುತ್ತಾರೆ ಅಥವಾ ಪಡೆದುಕೊಳ್ಳುತ್ತಾರೆ. ಅಧ್ಯಯನ ಶಿಸ್ತುಗಳು ವಿಶ್ವವಿದ್ಯಾಲಯಕ್ಕೆ ಮಾಡುವ ನೇಮಕಗಳನ್ನು, ಮತ್ತು ಪಠ್ಯಕ್ರಮಗಳು ವಿಭಾಗಗಳಾಗಿ ರಚಿತವಾಗಿದ್ದರೆ ಅವುಗಳನ್ನೂ ಸಹ ನಿಯಂತ್ರಿಸುತ್ತವೆ. ಪ್ರತಿಯೊಂದು ಅಧ್ಯಯನ ಶಿಸ್ತಿಗೂ ಸಂಬಂಧಪಟ್ಟಂತೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಪ್ರಮುಖ ನಿಯತಕಾಲಿಕೆಗಳಿವೆ: ಸಾಮಾನ್ಯವಾಗಿ ಅಧ್ಯಯನ ಶಿಸ್ತುಗಳ ಹೆಸರೇ ನಿಯತಕಾಲಿಕೆಗಳ ಶೀರ್ಷಿಕೆಯ ಭಾಗವಾಗಿರುತ್ತದೆ. ಪ್ರತಿ ದೇಶದಲ್ಲೂ ಒಂದು ನಿರ್ದಿಷ್ಟ ಅಧ್ಯಯನ ಶಿಸ್ತುಗಳ ವಿದ್ವಾಂಸರುಗಳ ರಾಷ್ಟ್ರೀಯ ಸಂಘಟನೆಗಳು ಇರುತ್ತದೆ. ಅಲ್ಲದೆ ಈ ಅಧ್ಯಯನ ಶಿಸ್ತುಗಳ ಹೆಸರಿನಲ್ಲಿ ಅಂತಾರಾಷ್ಟ್ರೀಯ ಸಂಘಟನೆಗಳ ಸರಣಿಯು ಬಹಳಷ್ಟಿವೆ.

ಹೀಗೆ, ಅಧ್ಯಯನ ಶಿಸ್ತುಗಳು ಸಂಘಟನೆಗಳಾಗಿ ವಿದ್ವತ್ಪೂರ್ಣ ಶ್ರೇಣಿಯಲ್ಲಿ ಹೆಚ್ಚಿನ ಮಟ್ಟಿಗೆ ಪ್ರವೇಶವನ್ನು ನಿಯಂತ್ರಿಸುತ್ತವೆ, ಪ್ರತಿಷ್ಠೆಯನ್ನು ನೀಡುತ್ತವೆ, ಮತ್ತು ಸೇವಾ ಬಡ್ತಿಯನ್ನು ನಿಯಂತ್ರಿಸುತ್ತವೆ. ಅವು 'ರಕ್ಷಣಾತ್ಮಕ' ಶಾಸನವನ್ನು ಮಾಡಿ ಅದನ್ನು ಜಾರಿಗೊಳಿಸಲು ಸಮರ್ಥವಾಗಿರುತ್ತವೆ. ಸಾರ್ವಜನಿಕ ಸಂದರ್ಭಗಳಲ್ಲಿ ಅವು 'ಬಹುಶಿಸ್ತಿನ' (multi-disciplinarity) ಅಧ್ಯಯನ ರೀತಿಯದ ಪ್ರಯೋಜನಗಳನ್ನು ಒಪ್ಪಿ ಅದನ್ನು ಗೌರವಿಸಬಹುದು, ಆದರೆ ಅದೇ ಸಮಯದಲ್ಲಿ ಅವು ಖಂಡಿತವಾಗಿಯೂ ಆ ಪ್ರಯತ್ನದ ಸಾಧ್ಯತೆಗಳ ಮಿತಿಗಳನ್ನು ಎತ್ತಿತೋರಿಸುತ್ತವೆ.

ಇದರೊಟ್ಟಿಗೆ, ಚಾಲ್ತಿಯಲ್ಲಿರುವ ಅಧ್ಯಯನ ಶಿಸ್ತುಗಳು ಅವು ಹಂಚಿಕೊಂಡಿರುವ ಸಂಶೋಧನಾ ವಿಷಯಗಳ ಆಯ್ಕೆಗೆ ಸಂಬಂಧಿಸಿದಂತಿರುವ ಪೂರ್ವಗ್ರಹಗಳು ಮತ್ತು

ಪ್ರಮೇಯಗಳು, ವಿದ್ವತ್ಪೂರ್ಣ ಜಿಜ್ಞಾಸೆಯ ಶೈಲಿ, ಹಾಗೂ ವಿದ್ವತ್ಪೂರ್ಣ ಸಮುದಾಯವು ಕಡ್ಡಾಯಗೊಳಿಸಲಾದ ಪಠ್ಯಗಳನ್ನೊಳಗೊಳ್ಳುವ ಸರಳಾರ್ಥದಲ್ಲಿ 'ಸಂಸ್ಕೃತಿಗಳಾಗಿವೆ'. ಅವು ತಮ್ಮ ಸಾಂಸ್ಕೃತಿಕ ಧೀರರು ಯಾರೆಂಬುದನ್ನು ಸಾರಿವೆ ('ಸಂಪ್ರದಾಯ'ಗಳಾಗಿ ಅವರನ್ನು ಪ್ರತಿಷ್ಠಾಪಿಸಿವೆ), ಮತ್ತು ಸಂಸ್ಕೃತಿಗಳನ್ನು ಮರುಮೌಲ್ಯಮಾಪನ ಮಾಡಲು ಅಗತ್ಯವಾದ ಸಂಶೋಧನೆಗಳನ್ನು ಅವು ಮತ್ತೆ ಮತ್ತೆ ನಡೆಸುತ್ತವೆ. ಒಂದು ನಿರ್ದಿಷ್ಟ ಅಧ್ಯಯನ ಶಿಸ್ತಿನ ಜೊತೆ ತಮ್ಮನ್ನು ಗುರುತಿಸಿಕೊಳ್ಳಲಾಗದ – ಕೆಲವರು ಹೆಚ್ಚು ಸ್ಪಷ್ಟವಾಗಿ ಇನ್ನು ಕೆಲವರು ಅಷೇನು ಸ್ಪಷ್ಟವಲ್ಲದ ರೀತಿಯಲ್ಲಿ – ಮತ್ತು ಸಮಾಜ ವಿಜ್ಞಾನಗಳಲ್ಲಿನ ಅದರ ಸ್ಪರ್ಧಾತ್ಮಕ ವಿಭಾಗಗಳಿಗಿಂತ ತಮ್ಮದೇ ಆದ ಶಿಸ್ತಿನ ಶ್ರೇಷ್ಠತೆಯನ್ನು ಕನಿಷ್ಟ ಪಕ್ಷ ಸಣ್ಣ ಧ್ವನಿಯಲ್ಲೂ ಹೇಳಿಕೊಳ್ಳಲು ವಿಫಲರಾದ ವಿದ್ವಾಂಸರುಗಳಿದ್ದಾರೆ. ಈ ಸಾಂಸ್ಕೃತಿಕ ಸ್ವಾಮಿನಿಷ್ಠೆಯ ವ್ಯಾಪಕತೆ ಮತ್ತು ಅದರ ಪರಿಣಾಮಕಾರಿತ್ವವನ್ನು ಅಲ್ಲಗಳೆಯಬಾರದು.

ಆದಾಗ್ಯೂ, ಚಾಲ್ತಿಯಲ್ಲಿರುವ ಅಧ್ಯಯನ ಶಿಸ್ತುಗಳ ಮರುಸೃಷ್ಟಿಸಿಕೊಳ್ಳುವ ಸಾಮರ್ಥ್ಯವನ್ನು ಕುಂಠಿತಗೊಳಿಸುವಲ್ಲಿ ಎರಡು ಪ್ರಮುಖ ಶಕ್ತಿಗಳು ಪಾತ್ರ ವಹಿಸುತ್ತಿವೆ. ಮೊದಲನೆಯದಾಗಿ ಅತ್ಯಂತ ಸಕ್ರಿಯವಾಗಿರುವ ವಿದ್ವಾಂಸರುಗಳ ಕ್ರಿಯೆ. ಎರಡನೆಯದಾಗಿ, ಹಣಕಾಸಿನ ಸಂಪನ್ಮೂಲಗಳನ್ನು ನಿಯಂತ್ರಿಸುವ – ವಿಶ್ವವಿದ್ಯಾಲಯ ಆಡಳಿತಗಾರರು, ರಾಷ್ಟ್ರೀಯ ಸರ್ಕಾರಗಳು, ಅಂತರರಾಜ್ಯ ಸಂಸ್ಥೆಗಳು, ಸಾರ್ವಜನಿಕ ಹಾಗೂ ಖಾಸಗಿ ಪ್ರತಿಷ್ಠಾನಗಳು – ಮುಂತಾದವರ ಅಗತ್ಯಗಳು.

ಸಕ್ರಿಯವಾಗಿರುವ ವಿದ್ವಾಂಸರುಗಳು ನಿರಂತರವಾಗಿ ಒಂದು ಚಿಕ್ಕ ಸಮಾನ ಆಸಕ್ತಿಯುಳ್ಳ ಕಾರ್ಯನಿರತ ಸಮುದಾಯಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಲೇ ಇರುತ್ತಾರೆ. ವೇಗವಾದ ವಿಮಾನಯಾನ ಬೆಳವಣಿಗೆ ಮತ್ತು ಈಗ ಸೃಷ್ಟಿಯಾಗಿರುವ ಅಂತರ್‌ಜಾಲದಿಂದಾಗಿ ಈ ಕ್ರಿಯೆ ಅಗಾಧವಾಗಿ ವಿಸ್ತಾರಗೊಂಡಿದೆ. ಎರಡು ಗಾತ್ರಗಳ ಚಿಕ್ಕ ಕಾರ್ಯನಿರತ ಸಮುದಾಯಗಳಿವೆ. ನಿದಿಷ್ಟ ಸಂಶೋಧನಾ ಯೋಜನೆಗಳಲ್ಲಿ ಸಂಖ್ಯೆಯಲ್ಲಿ ಸಾಮಾನ್ಯವಾಗಿ ಹನ್ನೆರಡು ಸದಸ್ಯರಿಗಿಂತಲೂ ಕಡಮೆಯಿರುವ ಸಹಯೋಗಿಗಳ ಗುಂಪುಗಳಿವೆ. ಮತ್ತು ನೂರಕ್ಕೂ ಹೆಚ್ಚಾಗಿರುವ ಅಂತಹುದೇ ಸಂಶೋಧನಾ ಯೋಜನೆಗಳಲ್ಲಿ ತೊಡಗಿಕೊಂಡಿರುವ ಸ್ವಲ್ಪಮಟ್ಟಿಗೆ ದೊಡ್ಡದಾದ ಸಮುದಾಯಗಳಿವೆ. ಆದಾಗ್ಯೂ, ಸಮಾನ ಅಂಶಗಳನ್ನು ಸ್ವಲ್ಪ ಹಿಗ್ಗಿಸಿ ಹೇಳದ ಹೊರತು ಇದಕ್ಕಿಂತ ದೊಡ್ಡದಾದ ಸಮುದಾಯಗಳಿರುವುದು ವಿರಳ. ಕಳೆದ ಮೂವತ್ತು ವರ್ಷಗಳಲ್ಲಿ ಅಂತಹ 'ಸಂಶೋಧನಾ ಸಮುದಾಯ'ಗಳು ಅಥವಾ 'ಜಾಲ'ಗಳು ಅಸ್ತಿತ್ವಕ್ಕೆ ಬಂದಿರುವುದನ್ನು ಪರಿಶೀಲಿಸಿದರೆ (ಅಂತಹ ಒಂದು ಜಾಗತಿಕ ಪ್ರಾಯೋಗಿಕ ವಿಧಾನದ ಸಂಶೋಧನೆ ನನಗೆ ಗೊತ್ತಿರುವ ಮಟ್ಟಿಗೆ ನಡೆದಿಲ್ಲ), ಎರಡು ಅಂಶಗಳನ್ನು ನಾವು ಮನಗಾಣಬಹುದು ಎಂದು ನನಗನಿಸುತ್ತದೆ: ಒಟ್ಟಾರೆಯಾಗಿ ಅಂತಹ ಜಾಲಗಳ ಸಂಖ್ಯೆ ಹೆಚ್ಚಾಗುತ್ತಲೇ ಇದೆ; ಮತ್ತು ಎಲ್ಲಾ ಅಧ್ಯಯನ ಶಿಸ್ತುಗಳ ಸದಸ್ಯರನ್ನು ಒಳಗೊಂಡಿರುತ್ತದೆ, ಪರಿಣಾಮವಾಗಿ ಅವರಲ್ಲಿ ಯಾರೂ ಸಹ ಒಂದೇ ಪ್ರವರ್ಗಕ್ಕೆ ಸೇರಿದವರಾಗಿರುವುದಿಲ್ಲ; ವಾಸ್ತವವಾಗಿ, ಅವರಲ್ಲಿ ಬಹಳಷ್ಟು ಮಂದಿ ಗಮನಾರ್ಹವಾಗಿ ವೈವಿಧ್ಯಮಯ ಅಧ್ಯಯನ ಶಿಸ್ತುಗಳ ಹಣೆಪಟ್ಟಿಯನ್ನು ಹೊಂದಿರುವುದು ಸ್ಪಷ್ಟ. ಮೆದುಳಿನ ಅಧ್ಯಯನ ಮತ್ತು ಸಂಜ್ಞಾನಾತ್ಮಕ ಅಧ್ಯಯನದಿಂದ ಹಿಡಿದು ವಿಜ್ಞಾನ

ಅಧ್ಯಯನ ಮತ್ತು ವೈಚಾರಿಕಾ ಆಯ್ಕೆ, ಅಂತಾರಾಷ್ಟ್ರೀಯ ರಾಜಕೀಯ ಅರ್ಥಶಾಸ್ತ್ರ ಮತ್ತು ವಿಶ್ವ ಇತಿಹಾಸದವರೆಗೆ, ಅಂತಹ ಗುಂಪುಗಳ ಉದಾಹರಣೆಗಳನ್ನು ನಾವು ಕೊಡಬಹುದು. ಇವು ಡಜನ್‌ಗಟ್ಟಲೆ, ಬಹುಶಃ ನೂರಾರು, ಇನ್ನೂ ಹೆಚ್ಚಿವೆ ಎನ್ನುವುದರಲ್ಲಿ ಅನುಮಾನವಿಲ್ಲ.

ಇಂತಹ ಗುಂಪುಗಳ ಬೌದ್ಧಿಕ ನಿಲುವಿನ ಬಗ್ಗೆ ಗಮನಿಸಬೇಕಾದ ಮುಖ್ಯ ಅಂಶವೆಂದರೆ, ವರ್ತಮಾನ/ಗತಕಾಲ; ನಾಗರಿಕ/ಅನಾಗರಿಕ; ಅದಲ್ಲದೆ ಮಾರುಕಟ್ಟೆ, ಪ್ರಭುತ್ವ, ಮತ್ತು ನಾಗರಿಕ ಸಮಾಜ ಇವೇ ಮೊದಲಾದ ವಿಧಗಳಲ್ಲಿ ಸಾಂಪ್ರದಾಯಿಕವಾಗಿ ವಿಭಜಿತಗೊಂಡ ಅಧ್ಯಯನ ಶಿಸ್ತುಗಳ ಬೌದ್ಧಿಕ ಬೇರ್ಪಡಿಸುವಿಕೆಗೆ ಒದಗಿಸಿದ ಐತಿಹಾಸಿಕ ಆಧಾರಗಳು ಇವರಿಗೆ ಉಪಯುಕ್ತವೆನಿಸುವುದಿಲ್ಲ ಎನ್ನುವುದು. ಬಹುಸಂಖ್ಯಾತ ಜಾಲಗಳಲ್ಲಿ ಭಾಗವಹಿಸುವವರು ತಮ್ಮ ಮೂಲ ಸಂಸ್ಥೆಯಿನ ಅಸ್ಮಿತೆಯನ್ನು ಉಳಿಸಿಕೊಂಡು ಹೋಗುತ್ತಾರೆ. ಏಕೆಂದರೆ, ಅದನ್ನು ತ್ಯಜಿಸುವುದರಿಂದ ಅವರಿಗೆ ಸಧ್ಯಕ್ಕೆ ಯಾವುದೇ ಲಾಭವಿಲ್ಲ (ಬಹುಶಃ ಸ್ವಲ ಮಟ್ಟಿನ ಅಪಾಯಸಂಭವವಿರಬಹುದು), ಆದರೆ ಅವರ ವಿದ್ವತ್‌ಪೂರ್ಣ ಸಂಶೋಧನೆಯು ಆ ಪ್ರವರ್ಗಗಳನ್ನು ಅನುಸರಿಸುವುದಿಲ್ಲ.

ಇದಲ್ಲದೆ, ತಮ್ಮ ಸಂಶೋಧನಾ ಯೋಜನೆಗಳಿಗೆ ಅಧ್ಯಯನ ಶಿಸ್ತುಗಳ ಪ್ರವರ್ಗಗಳು ಅಡ್ಡಿಯಾಗುತ್ತವೆ ಎಂದು ಅವರಿಗನಿಸಿದರೆ, ಅದರಲ್ಲೂ ಮುಖ್ಯವಾಗಿ ಧನಸಹಾಯ ಪಡೆಯಲು ಅಡ್ಡಿಯಾಗುತ್ತದೆ ಎನ್ನುವ ಸಂದರ್ಭದಲ್ಲಿ, ಧನಸಹಾಯ ಮಾಡುವ ಸಂಸ್ಥೆಗಳಿಗೆ ಸಮಾಜ ವಿಜ್ಞಾನಗಳ ಅಧ್ಯಯನ ಶಿಸ್ತುಗಳ 'ಸಾಂಪ್ರದಾಯಿಕ' ಕಳಕಳಿಗಳಿಗಿಂತ ತಮ್ಮ ಸಂಶೋಧನೆಯ 'ಅತ್ಯಾಧುನಿಕ' ಪರಿಕಲ್ಪನಾ ನಿರೂಪಣೆಗೆ ಏಕೆ ಆದ್ಯತೆ ನೀಡಬೇಕು ಎನ್ನುವುದರ ಕುರಿತು ಸಕ್ರಿಯವಾಗಿ ಮನವೊಲಿಸಲು ತೊಡಗುತ್ತಾರೆ. ಖಾಸಗಿ ದತ್ತಿ ಸೇವಾ ಪ್ರತಿಷ್ಠಾನಗಳ (operating foundations) ರೂಪದಲ್ಲಿ ವಿಶ್ವವಿದ್ಯಾಲಯದೊಳಗೆ 'ಅಧ್ಯಯನ ಸಂಸ್ಥೆ'ಗಳು ಅಥವಾ ಇತರ ವಿಶೇಷ ರಚನೆಗಳನ್ನು ಸ್ಥಾಪಿಸುವುದರ ಮೂಲಕ ಅಥವಾ ವಿಶ್ವವಿದ್ಯಾಲಯದ ವ್ಯಾಪ್ತಿಯ ಹೊರಗೆ ಪ್ರತಿಷ್ಠೆಯ ಸ್ವಾಯತ್ತ ಸಂಸ್ಥೆಗಳ (ಅಕಾಡೆಮಿಗಳು, ಉನ್ನತ ಅಧ್ಯಯನಕ್ಕೆಂದಿರುವ ಸಂಸ್ಥೆಗಳು) ಮೂಲಕ ಅವರು ಈ ಕೆಲಸವನ್ನು ಮಾಡುತ್ತಾರೆ. ಅಧ್ಯಯನದ ಬಹುನಾಮಗಳಂತೆ ಇಲ್ಲಿಯೂ ಸಹ ಐತಿಹಾಸಿಕ ಬೆಳವಣಿಗೆಯು ವಕ್ರರೇಖೀಯದ್ದಾಗಿದೆ: ಬಹುನಾಮಗಳಿಂದ ಕ್ರಮೇಣ ಕಡಮೆಯಾಗುತ್ತಾ ಬಂದು ಮತ್ತೆ ಬಹುನಾಮಗಳನ್ನು ಪಡೆಯುತ್ತವೆ; ಹಲವು ಸಾಂಸ್ಥಿಕ ರಚನೆಗಳಿಂದ ವಿಶ್ವವಿದ್ಯಾಲಯದೊಳಗೆ ವಿದ್ವತ್ಪೂರ್ಣ ಚಟುವಟಿಕೆಗಳ ಮೇಲೆ ಕೇಂದ್ರೀಕೃತವಾಗುತ್ತಾ ಹೋಗಿ ಮತ್ತೆ ಬಹು ರಚನೆಗಳಿಗೆ ಮರಳುತ್ತವೆ ಎನ್ನುವುದನ್ನು ನಾವು ಗಮನಿಸಬೇಕು.

## ವಿಶ್ವವಿದ್ಯಾಲಯಗಳು

ಹಣಕಾಸಿನ ಸಂಪನ್ಮೂಲದ ದಾನಿಗಳ ಪ್ರವೇಶವು ಈ ಚಿತ್ರಣದ ಮೇಲೆ ಪರಿಣಾಮ ಬೀರುವುದು ಈ ಹಂತದಲ್ಲಿಯೆ. 1945ರಿಂದ ಇಂದಿನವರೆಗಿನ ಕಾಲವು ವಿಶ್ವ ಶಿಕ್ಷಣದಲ್ಲಿ ಅಗಾಧವಾದ ಬದಲಾವಣೆಯನ್ನು ಕಂಡಿದೆ. ಪ್ರಾಥಮಿಕ ಶಿಕ್ಷಣವು ಈಗ ಒಂದು ಸಾರ್ವತ್ರಿಕ ನಿಯಮವಾಗಿದೆ, ಮತ್ತು ಮಧ್ಯಮ ಅಥವಾ ಅಧಿಕ ತಲಾವಾರು ಒಟ್ಟು ರಾಷ್ಟ್ರೀಯ ಉತ್ಪನ್ನ ಆದಾಯವನ್ನು ಹೊಂದಿರುವ ಎಲ್ಲ ದೇಶಗಳಲ್ಲೂ ದ್ವಿತೀಯ ಹಂತದ ಶಿಕ್ಷಣ ಅಗತ್ಯವಾಗಿದೆ.

ಮೂರನೇ ಹಂತದ ಶಿಕ್ಷಣವು ವಿಸ್ತಾರವಾಗುತ್ತಾ ಹೋಗಿದೆ. 1945ರಲ್ಲಿ ವಿಶ್ವವಿದ್ಯಾಲಯದ ಶಿಕ್ಷಣವು ಕೇವಲ ಕೆಲವೇ ಮಂದಿ ಸಮವಯಸ್ಕರಿಗೆ ಮೀಸಲಾಗಿತ್ತು. ಅಲ್ಲಿಂದೀಚೆಗೆ ಅದು ಅಸಾಧ್ಯ ಬೆಳವಣಿಗೆಯನ್ನು ಕಂಡಿದೆ, ಶ್ರೀಮಂತ ದೇಶಗಳಲ್ಲಿ ಅದರ ಪ್ರಮಾಣ ಶೇಕಡ 50ರಷ್ಟಿದ್ದು ಬಡ ದೇಶಗಳಲ್ಲೂ ಸಹ ಗಣನೀಯವಾಗಿ ಬೆಳೆಯುತ್ತಿದೆ. ವಿಶ್ವದ ಆರ್ಥಿಕ ಬೆಳವಣಿಗೆಯ ಕಾಲ ಚೆನ್ನಾಗಿರುವವರೆಗೆ (ಮೂಲಭೂತವಾಗಿ 1945 – 1970) ಇದು ಯಾವ ಸಮಸ್ಯೆಯನ್ನು ತಂದೊಡ್ಡಲಿಲ್ಲ. ಅಗತ್ಯವಾದ ಧನಸಹಾಯ ಸುಲಭವಾಗಿ ಸಿಗುತ್ತಿತ್ತು. ಆದರೆ ಅಲ್ಲಿಂದೀಚೆಗೆ, ವಿಶ್ವವಿದ್ಯಾಲಯಗಳು ಒಂದೆಡೆಯಿಂದ ನಿರಂತರವಾಗಿ ಹೆಚ್ಚಾಗುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ (ಜನಸಂಖ್ಯೆಯ ಬೆಳವಣಿಗೆ ಮತ್ತು ಒಬ್ಬ ವ್ಯಕ್ತಿಯ ಶಿಕ್ಷಣಮಟ್ಟ ಎಷ್ಟಿರಬೇಕೆಂಬುದರ ಬಗ್ಗೆ ಸಮಾಜದಲ್ಲಿ ಹೆಚ್ಚುತ್ತಿರುವ ನಿರೀಕ್ಷೆ ಇವೆರಡು ಕಾರಣಗಳಿಂದ), ಮತ್ತೊಂದೆಡೆಯಿಂದ ಹಣಕಾಸಿನ ಸಂಪನ್ಮೂಲಗಳ ಕೊರತೆ (ಹಣಕಾಸಿನ ಸಂಕಷ್ಟವನ್ನು ಎದುರಿಸುತ್ತಿರುವ ಪ್ರಭುತ್ವಗಳಿಂದ ಅವರ ಮೇಲೆ ಹೇರಲ್ಪಟ್ಟಿದ್ದು) ಇವೆರಡರ ನಡುವಿನ ಅಡಕೊತ್ತರಿಯಲ್ಲಿ ಸಿಕ್ಕಿಕೊಂಡಿದೆ.

ಅಡಕೊತ್ತರಿಯ ಈ ಚಲನೆಯ ಪರಿಣಾಮಗಳು ಬಹು ಆಗಿವೆ. ಅದರಲ್ಲಿ ಒಂದೆಂದರೆ ವಿಶ್ವವಿದ್ಯಾಲಯದ ಶಿಕ್ಷಣಕ್ಕೆ 'ಎರಡನೇ ಆದ್ಯತೆ ನೀಡುವುದು (secondarisation)', ಅಂದರೆ ಸರ್ಕಾರ ಮತ್ತು ಇತರ ಆಡಳಿತಾಧಿಕಾರಿಗಳಿಂದ ಪ್ರಾಧ್ಯಾಪಕರು ಬೋಧಿಸುವ ಅವಧಿಯು ಹೆಚ್ಚಾಗಬೇಕು ಮತ್ತು ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳಿಗೆ ಬೋಧಿಸಬೇಕೆನ್ನುವ ನಿರಂತರ ಒತ್ತಡ. ಎರಡನೆಯದು, ವಿದ್ವಾಂಸರುಗಳು, ಅದರಲ್ಲೂ ಅತ್ಯಂತ ಪ್ರತಿಷ್ಠಿತರಾದವರು, ಅಸ್ತಿತ್ವದಲ್ಲಿರುವ ಅಧ್ಯಯನ ಶಿಸ್ತುಗಳನ್ನು ಕಡೆಗಣಿಸುತ್ತಿರುವ ರಚನೆಗಳಲ್ಲಿ ತಮ್ಮನ್ನು ಕಂಡುಕೊಳ್ಳುವ ಸಾಧ್ಯತೆಯಿರುವುದರಿಂದ, ಉತ್ತಮ ಹುದ್ದೆಗಳ ಅವಕಾಶಗಳಿಗಾಗಿ ವಿಶ್ವವಿದ್ಯಾಲಯ ವ್ಯವಸ್ಥೆಯನ್ನು ಬಿಟ್ಟು ಹೊರಹೋಗುತ್ತಿರುವ ಸನ್ನಿವೇಶ.

ಮೂರನೆಯದು ಮತ್ತು ಬಹುಶಃ ಅತ್ಯಂತ ಗಮನಾರ್ಹವಾದದ್ದೆಂದರೆ, ವಿಶ್ವವಿದ್ಯಾಲಯ ಆಡಳಿತಗಾರರು (ಮತ್ತು ಶಿಕ್ಷಣ ಸಚಿವಾಲಯಗಳು) ಎದುರಿಸುತ್ತಿರುವ ಸಂದಿಗ್ಧತೆ: ಅಧ್ಯಯನ ಶಿಸ್ತುಗಳ ನಡುವಿನ ಗಡಿಗಳು ಕುಸಿದು ಬೀಳುತ್ತಿರುವ ಪರಿಣಾಮವಾಗಿ ಹೊಸ ವಿಶೇಷ ರಚನೆ, ವಿಭಾಗ, ಸಂಸ್ಥೆಗಳನ್ನು ಸೃಷ್ಟಿಸಬೇಕೆಂದು ಅನಿವಾರ್ಯವಾದ ದುಬಾರಿ ಬೇಡಿಕೆಗಳು ಇರುವ ಸಮಯದಲಿಯೇ ಸಂಪನ್ಮೂಲ ಕೊರತೆಯನ್ನು ಎದುರಿಸುತ್ತಿರುವುದು. ಈ ಪರಿಸ್ಥಿತಿ ವಿಶ್ವವಿದ್ಯಾಲಯದೊಳಗೆ ರಚನಾತ್ಮಕ ಬದಲಾವಣೆಯನ್ನು ತರುವ ಹಾಗೂ ಆದ್ದರಿಂದ ಅಸ್ತಿತ್ವದಲ್ಲಿರುವ ರಚನೆಗಳ ಸ್ವೀಕಾರಾರ್ಹತೆಯನ್ನು ಮರುಪರಿಶೀಲಿಸುವ ಮೂಲಕ ಹಣಕಾಸಿನ ಈ ಸಂದಿಗ್ಧತೆಗೆ ಪರಿಹಾರ ಕಂಡುಕೊಳ್ಳಲು ಮಾರ್ಗಗಳನ್ನು ಹುಡುಕುವ ಪ್ರಯತ್ನಗಳೆಡೆಗೆ ಆಡಳಿತಗಾರರನ್ನು ಪ್ರೇರೇಪಿಸಬೇಕು.

ಹಾಗಾದರೆ ನಾವೆತ್ತ ಸಾಗುತ್ತಿದ್ದೇವೆ? ಮೊದಲನೆಯ ಅಂಶವೆಂದರೆ ಕೇವಲ ವಿಶ್ವವಿದ್ಯಾಲಯ ಮಾತ್ರವೇ ಜ್ಞಾನದ ಸೃಷ್ಟಿ ಹಾಗೂ ಮರುಸೃಷ್ಟಿಯ ಕೇಂದ್ರ ಎನ್ನುವ ನಂಬಿಕೆಯನ್ನು ಮರುಪರಿಶೀಲಿಸುವುದು. ಇದು ಹತ್ತೊಂಬತ್ತನೇ ಶತಮಾನದ ಆದಿಯಲ್ಲಿ ಪ್ರಾರಂಭಗೊಂಡ ಬೆಳವಣಿಗೆಯ ಪರಿಣಾಮವಾಗಿದ್ದು 1945–70ರ ವೇಳೆಗೆ ತನ್ನ ಪರಾಕಾಷ್ಠೆಯನ್ನು ತಲುಪಿ ನಂತರ ಅದರ ಅವನತಿಯು ಪ್ರಾರಂಭವಾಯಿತು ಮತ್ತು

ಇಪ್ಪತ್ತೊಂದನೇ ಶತಮಾನದಲ್ಲಿ ಅದು ಮತ್ತಷ್ಟು ಅವನತಿ ಹೊಂದಬೇಕು ಎಂದು ಹೇಳಬಹುದು. ಖಂಡಿತವಾಗಿಯೂ ವಿಶ್ವವಿದ್ಯಾಲಯಗಳು ಅಸ್ತಿತ್ವದಲ್ಲಿರುತ್ತವೆ ಆದರೆ ಕ್ರಮೇಣ ಹೆಚ್ಚು ಹೆಚ್ಚಾಗಿ ಅವು ಆಕ್ರಮಿಸಿರುವ ಸ್ಥಳವನ್ನು (ಹಾಗೂ ಸಾಮಾಜಿಕ ಧನಸಂಪನ್ಮೂಲ) ಇತರ ಸಂಸ್ಥೆಗಳೊಂದಿಗೆ ಹಂಚಿಕೊಳ್ಳಬೇಕಾಗುತ್ತದೆ.

ಎರಡನೆಯದಾಗಿ, ನಾವು 'ಎರಡು ಸಂಸ್ಕೃತಿಗಳ' ಪ್ರಶ್ನೆಯನ್ನು ಪುನಃ ಪರಿಶೀಲಿಸುವ ಏಕಕಾಲದಲ್ಲಿ ಗದ್ದಲಮಯ, ಜಾಗತಿಕ ಮತ್ತು ಸ್ವಲ್ಪಮಟ್ಟಿಗೆ ರಾಜಕೀಯಗೊಳ್ಳುವ ಲಕ್ಷಣಗಳನ್ನು ತೋರಿಸುತ್ತಿರುವ ಜ್ಞಾನಮೀಮಾಂಸೆಯ ಒಂದು ಪ್ರಮುಖ ಚರ್ಚೆಯನ್ನು ಪ್ರಾರಂಭಿಸುತ್ತಿದ್ದೇವೆ. ಈ ಚರ್ಚೆಯ ಫಲಿತಾಂಶವೇನು ಎನ್ನುವ ಪ್ರಶ್ನೆ ಹಾಗೆಯೆ ಉಳಿಯುತ್ತದೆ. ಜ್ಞಾನ ಜಗತ್ತನ್ನು ಮೀರಿದ ವಿಶಾಲವಾದ ಸಾಮಾಜಿಕ ಜಗತ್ತಿನಲ್ಲಾಗುವ ಬೆಳವಣಿಗೆಗಳ ಮೇಲೆ ಅದು ಭಾಗಶಃ ಅವಲಂಬಿತವಾಗಿರುತ್ತದೆ. ಅಸ್ತಿತ್ವದಲ್ಲಿರುವ ಜ್ಞಾನಮೀಮಾಂಸೆಯ ವಿಭಜನೆಗಳ ಸಮಸ್ಯೆಯನ್ನು ಪರಿಹರಿಸುವ ಹೊಸ ಒಮ್ಮತ ಬೇಕೆಂಬ ಒತ್ತಡವು ಎಲ್ಲರೂ ಒಪ್ಪಿಕೊಳ್ಳಲೇಬೇಕಾದ ವಾದಗಳ ಸಮುಚ್ಚಯವನ್ನು ಅಭಿವೃದ್ಧಿಸುವುದರಲ್ಲಿ ಯಶಸ್ಸು ಕಾಣಬಹುದು ಎಂದು ಖಚಿತವಾಗಿ ಹೇಳಲಾಗದು. ಅಂತಹ ಒತ್ತಡವು ಆಂತರಿಕವಾಗಿ ಸಮಂಜಸವೆಂದು ತೋರುವ ಮಹತ್ವದ ಬೌದ್ಧಿಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಾಗದ ಅಥವಾ ಬಾಹ್ಯದಲ್ಲಿ ಅದಕ್ಕೆ ವಿರುದ್ಧವಾದ ಶಕ್ತಿಗಳ ಪ್ರತಿರೋಧದಿಂದ ಹತಾಶೆಗೊಳ್ಳುವ ಸಾಧ್ಯತೆ ಇದೆ. ಆದಾಗ್ಯೂ, ಈ ವಿಷಯದಲ್ಲಿ ಈಗಿರುವ ವ್ಯವಸ್ಥೆಗೆ ನೆಮ್ಮದಿಯಿಂದ ಹಿಂದಿರುಗುವ ಖಾತ್ರಿಯೂ ಇಲ್ಲ. ವ್ಯಾಪಕವಾಗಿ ಒಪ್ಪಿತವಾಗಿರುವ ವಿದ್ವತ್ತಿನ ಸಾಮಾನ್ಯ ನಿಯಮಗಳು ಕುಸಿದು ಬೀಳುತ್ತಿರುವುದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದು. ನಿಜಕ್ಕೂ, ಕೆಲವರು ಪ್ರತಿಪಾದಿಸುವಂತೆ ಈಗಾಗಲೇ ಈ ಪ್ರಕ್ರಿಯೆ ನಡೆಯುತ್ತಿದೆ.

ಆದಾಗ್ಯೂ, ಒಂದು ವೇಳೆ ಹೊಸ ಒಮ್ಮತವೊಂದು ಸಾಧ್ಯವಾದರೆ ಅದು ಖಂಡಿತವಾಗಿ ಅಸ್ತಿತ್ವದಲ್ಲಿರುವ ವಿಶ್ವವಿದ್ಯಾಲಯಗಳ ನೈಸರ್ಗಿಕ ವಿಜ್ಞಾನ, ಮಾನವಿಕಗಳು, ಮತ್ತು ಸಮಾಜ ವಿಜ್ಞಾನಗಳೆಂಬ ತ್ರಿವಿಧ ವಿಭಜನೆಯನ್ನು ಪ್ರಶ್ನಿಸುತ್ತದೆ. ಅದು ಕಣ್ಮರೆಯಾದರೆ ಅದರ ಜಾಗದಲ್ಲಿ ಏನು ಬರುತ್ತದೆ? ಜ್ಞಾನದ ಒಂದು ಏಕೀಕೃತ ಶಾಖೆಯೇ? ಅಥವಾ ವೈದ್ಯಶಾಸ್ತ್ರ (ಆರೋಗ್ಯ ಸೇವೆಯಾಗಿ), ನ್ಯಾಯಶಾಸ್ತ್ರ (ಸಾರ್ವಜನಿಕ ನೀತಿಯಾಗಿ), ವ್ಯವಹಾರ ಆಡಳಿತ (ಸಾಂಸ್ಥಿಕ ನಿರ್ವಹಣೆಯಾಗಿ) ಇತ್ಯಾದಿ, 'ವೃತ್ತಿಪರ' ಶಾಲಾಶಿಕ್ಷಣದಲ್ಲಿ ಮರುರೂಪಿಸಲಾದ ಚಟುವಟಿಕೆಗಳಾಗಿ ಹೀಗೆ ಮುಂದುವರೆಯುತ್ತ ಹೋಗುತ್ತದೆಯೊ?

ಜ್ಞಾನಮೀಮಾಂಸೆಯ ಪುನರೇಕೀಕರಿಸಿದ ಜ್ಞಾನದ ಶಾಖೆಯನ್ನು ಸ್ಥಾಪಿಸಿದಲ್ಲಿ ಅದರೊಳಗೆ ಈಗಿರುವ ಸಮಾಜ ವಿಜ್ಞಾನಗಳು ಯಾವ ಪಾತ್ರ ವಹಿಸುತ್ತವೆ? ಒಂದರ್ಥದಲ್ಲಿ ಕೇಂದ್ರ ಪಾತ್ರ ವಹಿಸುತ್ತವೆ, ಏಕೆಂದರೆ ಪುನರೇಕೀಕರಿಸುವಿಕೆಯು, ನಾವೀಗಾಗಲೇ ನೋಡಿರುವಂತೆ, ನೈಸರ್ಗಿಕ ವಿಜ್ಞಾನ ಮತ್ತು ಮಾನವಿಕಗಳು ಎರಡು ಸಮಾಜ ವಿಜ್ಞಾನಗಳ ಕೆಲವು ದೀರ್ಘಕಾಲದ ಪ್ರಮೇಯಗಳನ್ನು, ಅದರಲ್ಲೂ ಮುಖ್ಯವಾಗಿ ಜ್ಞಾನದ ಸಾಮಾಜಿಕ ಬೇರುಗಳನ್ನು, ಒಪ್ಪಿಕೊಳ್ಳುವುದನ್ನು ಒಳಗೊಳ್ಳುತ್ತದೆ. ಆದರೆ ಅಂತಹ ಸಮಗ್ರತೆಯಲ್ಲಿ ಯಾವ ತರಹದ ವಿಭಾಗಗಳನ್ನು ರಚಿಸಲಾಗುತ್ತದೆ ಎನ್ನುವ ಪ್ರಶ್ನ ಹಾಗೆ ಉಳಿಯುತ್ತದೆ. ಈ

ಸಮಯದಲ್ಲಿ ಅದರ ಸ್ಪಷ್ಟ ತಿಳಿವಳಿಕೆ ಸಾಧ್ಯವೇ ಇಲ್ಲ. ಏಕೆಂದರೆ ಸಮಾಜ ವಿಜ್ಞಾನದಲ್ಲಿನ ವಿವಿಧ ಅಧ್ಯಯನ ಶಿಸ್ತುಗಳಿಗೆ ಆಧಾರವಾಗಿದ್ದ ಹತ್ತೊಂಬತ್ತನೇ ಶತಮಾನದ ವಿಭಜನೆಗಳನ್ನು ದುರ್ಬಲಗೊಳಿಸಿದ್ದರೂ ಸಹ, ಇತರ ವಿಭಜನೆಗಳು, ಅವುಗಳ ಬಗ್ಗೆ ಈಗ ಪ್ರಶ್ನೆಗಳೆದ್ದಿದ್ದರೂ ಕೂಡ, ನಿರಂತರ ಬೆಂಬಲವನ್ನು ಪಡೆಯುತ್ತಿವೆ. ಉದಾಹರಣೆಗೆ: ವಿಶಾಲ-ಸೂಕ್ಷ್ಮ (macro-micro), ಸ್ವ (self) (ಸಾಮಾಜಿಕ ಸ್ವ ಕೂಡ), ಮತ್ತು ಸಾಮಾಜಿಕ (ಅಥವಾ ಗುಂಪು ಅಥವಾ ಸಾಮೂಹಿಕ ಅಸ್ಮಿತೆಗಳು). ಅಲ್ಲದೆ ಸಮಾಜ ವಿಜ್ಞಾನಗಳೊಳಗೆ ನಾವು ಹೇಗೆ ಬೌದ್ಧಿಕ ವಿಭಜನೆಗಳನ್ನು ರೂಪಿಸುತ್ತೇವೆ ಎನ್ನುವುದರ ಮೇಲೆ ಲಿಂಗತ್ವದ ಪರಿಕಲ್ಪನೆಯ ಪೂರ್ಣ ಪ್ರಭಾವ ಹೇಗಿರಬಹುದು ಎನ್ನುವುದೂ ಕೂಡ ನಮಗೆ ತಿಳಿದಿಲ್ಲ.

ಹಾಗಾಗಿ, ಸಾಮಾಜಿಕ ವಾಸ್ತವವಾಗಿ ವಿಶ್ವವ್ಯವಸ್ಥೆಯಲ್ಲಿ ಮುಂದೇನಾಗುತ್ತದೆ ಎನ್ನುವುದರೊಂದಿಗೆ ಇಂತಹ ಪ್ರಶ್ನೆಗಳು ತಳಕುಹಾಕಿಕೊಂಡಿವೆ. ಸಮಾಜದಲ್ಲಿ ಏನಾಗುತ್ತಿದೆ ಎನ್ನುವುದರ ಕುರಿತು ಸಮಾಜ ವಿಜ್ಞಾನವು ಹೇಳುವ ಪ್ರಯತ್ನ ಮಾಡುತ್ತದೆ. ಇದು ಏಕಕಾಲದಲ್ಲಿ ಸಾಮಾಜಿಕ ವಾಸ್ತವವನ್ನು ಪ್ರತಿಬಿಂಬಿಸುವ ಹಾಗೂ ಅದರ ಮೇಲೆ ಪರಿಣಾಮ ಬೀರುವ ಸಾಮಾಜಿಕ ವಾಸ್ತವದ ವ್ಯಾಖ್ಯಾನವನ್ನು ಒಳಗೊಳ್ಳುತ್ತದೆ. ಅಂದರೆ, ಇದು ಏಕಕಾಲದಲ್ಲಿ ಶಕ್ತಿಯುತ ಮತ್ತು ತುಳಿತಕ್ಕೊಳಗಾದವರ ಸಾಧನವಾಗಿದೆ. ಸಮಾಜ ವಿಜ್ಞಾನವು ಸಾಮಾಜಿಕ ಸಂಘರ್ಷದ ವೇದಿಕೆಯಾಗಿದೆ ಅದರೆ ಇದು ಒಂದೇ ಅಲ್ಲ, ಮತ್ತು ಬಹುಶಃ ಮುಖ್ಯವಾದದು ಅಲ್ಲ. ಅದರ ಐತಿಹಾಸಿಕ ಸ್ವರೂಪವು ಅದರ ಹಿಂದಿನ ಸಾಮಾಜಿಕ ಸಂಘರ್ಷಗಳಿಂದ ರೂಪುಗೊಂಡಂತೆ ಅದರ ಸ್ವರೂಪವು ಭವಿಷ್ಯದ ಸಾಮಾಜಿಕ ಸಂಘರ್ಷಗಳ ಫಲಿತಾಂಶಗಳಿಂದ ರೂಪುಗೊಳ್ಳುತ್ತದೆ.

ಇಪ್ಪತ್ತೊಂದನೇ ಶತಮಾನದಲ್ಲಿನ ಸಮಾಜ ವಿಜ್ಞಾನವು ಬೌದ್ಧಿಕವಾಗಿ ಕತೂಹಲಭರಿತವಾಗಿರುತ್ತದೆ, ಸಾಮಾಜಿಕವಾಗಿ ಮಹತ್ವದ್ದಾಗಿರುತ್ತದೆ, ಹಾಗೂ ನಿಸ್ಸಂಶಯವಾಗಿ ವಿವಾಧದಿಂದ ಕೂಡಿರುತ್ತದೆ ಎಂದು ಹೇಳಬಹುದು. ನಮಗೀಗ ಗೊತ್ತಿರುವುದರ ಬಗ್ಗೆ ನಿರಹಂಕಾರ, ಮುಂದೆ ಎಂತಹ ಸಾಮಾಜಿಕ ಮೌಲ್ಯಗಳು ಸ್ಥಾಪಿತವಾಗುವುದನ್ನು ನೋಡಲು ಆಶಿಸುತ್ತೇವೆ ಎಂಬುದರ ಅರಿವು, ನಾವು ವಾಸ್ತವವಾಗಿ ಎಂತಹ ಪಾತ್ರ ವಹಿಸಲು ಸಾಧ್ಯ ಎನ್ನುವ ನಮ್ಮ ವಿವೇಚಿಸುವ ಶಕ್ತಿಯಲ್ಲಿ ಸಮತೋಲನ, ಇವೆಲ್ಲ ಅಂಶಗಳನ್ನು ಮೈಗೂಡಿಸಿಕೊಂಡು ಅಂತಹ ವಾಸ್ತವದೊಂದಿಗೆ ನಾವು ಸ್ಪಂದಿಸುವುದು ಉತ್ತಮ.

**ಎಮ್ಯಾನ್ಯುಯೆಲ್ ವಾಲರ್‌ಸ್ಟೀನ್ (Immanuel Wallerstein)** ಅವರು 1930ರಲ್ಲಿ ನ್ಯೂಯಾರ್ಕ್ ನಗರದಲ್ಲಿ ಜನಿಸಿದರು. ಅವರು ಬಿಂಗ್ಹ್ಯಾಮ್ಟನ್ (Binghamton) ವಿಶ್ವವಿದ್ಯಾಲಯದಲ್ಲಿ ಹೆಸರಾಂತ ಸಮಾಜಶಾಸ್ತ್ರ ಪ್ರಾಧ್ಯಾಪಕರು, ಮತ್ತು ಅರ್ಥಶಾಸ್ತ್ರ, ಐತಿಹಾಸಿಕ ವ್ಯವಸ್ಥೆಗಳು, ಮತ್ತು ನಾಗರೀಕತೆಗಳ ಫೆರ್ನಾಂಡ್ ಬ್ರೌಡೆಲ್ (Fernand Braudel) ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದಾರೆ. ಅವರು ಅಂತಾರಾಷ್ಟ್ರೀಯ ಸಮಾಜಶಾಸ್ತ್ರ ಸಂಘದ ಅಧ್ಯಕ್ಷರಾಗಿದ್ದರು (1994-98) ಮತ್ತು ಸಮಾಜ ವಿಜ್ಞಾನಗಳನ್ನು ಮರುರಚಿಸಲು ನೇಮಕವಾದ ಅಂತಾರಾಷ್ಟ್ರೀಯ ಗಲ್ಬೆಂಕಿಯನ್ ಆಯೋಗದ ಮುಖ್ಯಸ್ಥರಾಗಿದ್ದರು, ಮತ್ತು ಕಲಾ ಹಾಗೂ ವಿಜ್ಞಾನಗಳ ಅಮೇರಿಕನ್ ಅಕಾಡೆಮಿಯ ಫೆಲೊ ಆಗಿದ್ದರು. *The Modern World System* (ಮೂರು ಸಂಪುಟಗಳು), *Unthinking Social Science: The Limits of*

*Nineteenth Century Paradigms*, ಮತ್ತು *Utopistics: Or, Historical Choices for the Twenty-First Century*, ಇವು ಅವರಿಂದ ರಚಿತವಾದ ಕೃತಿಗಳು.

**ಟಿಪ್ಪಣಿ**

* ಇದನ್ನು ಸಾಮಾನ್ಯವಾಗಿ ಸಂಕೀರ್ಣ ಹೊಂದಾಣಿಕೆಯ ವ್ಯವಸ್ಥೆಗಳ (complex adaptive systems)ಅಧ್ಯಯನವೆಂದೂ ಸಹ ಅರ್ಥೈಸಿಕೊಳ್ಳಬಹುದು. ಇಲ್ಲಿ "ಸಂಕೀರ್ಣ" ಎನ್ನುವ ಪದವು ಅಸಂಖ್ಯಾತ ಮತ್ತು ವಿವಿಧ ರೀತಿಯ ಪರಸ್ಪರಾವಲಂಬಿತ ಆದರೆ ಸ್ವಾಯತ್ತವಾಗಿರುವ ಭಾಗಗಳನ್ನೊಳಗೊಂಡ ವೈವಿಧ್ಯವಾದ ವ್ಯವಸ್ಥೆಯನ್ನು, "ಹೊಂದಾಣಿಕೆ" ಎನ್ನುವುದು ಬದಲಾಯಿಸಲು, ಬದಲಾವಣೆ ಮಾಡಲು, ಮತ್ತು ಹಿಂದಿನ ಅನುಭವಗಳಿಂದ ಕಲಿಯುವ ವ್ಯವಸ್ಥೆಯ ಸಾಮರ್ಥ್ಯವನ್ನು, ಹಾಗೂ ವ್ಯವಸ್ಥೆ ಎನ್ನುವುದು ಸಂಬಂಧಿತ, ಪರಸ್ಪರಾವಲಂಬಿತ ಭಾಗಗಳ ಸಮುಚ್ಚಯದ ಒಂದು ಜಾಲವನ್ನು ಸೂಚಿಸುತ್ತದೆ.